ಕರ್ನಾಟಕ ವಿಧಾನಸಭೆ

ಗುರುವಾರ 28ನೇ ಜುಲೈ 2005ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ವಿತ್ತೀಯ ಕಾರ್ಯಕಲಾಪ

2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.(ಬೇಡಿಕೆಗಳ ಸಂಖ್ಯೆ:– 14, 7, 13, 12, 11, 27, 28, 24, 20, 8, 22, 3, 26, 15 5, 21, 2, 4, 19 ಮತ್ತು 25)

ಅಧ್ಯಕ್ಷರು: ಹಾಲಪ್ಪನವರೆ, ಬಹಳ ಜನ ಸದಸ್ಯರು ಬೇಡಿಕೆಯ ಮೇಲೆ ಮಾತನಾಡಲು ಹೆಸರುಗಳನ್ನು ಕೊಟ್ಟಿದ್ದಾರೆ. ಅವರುಗಳಿಗೆ ಇನ್ನೂ ಅವಕಾಶವನ್ನೆ ಕೊಟ್ಟಿಲ್ಲ. ಆದಕಾರಣ ತಾವು ಏನೇನು ಹೇಳಬೇಕೋ ಅದನ್ನು ಐದು ನಿಮಿಷದಲ್ಲಿ ಹೇಳಿಬಿಡಿ.

ಶ್ರೀ ಹೆಚ್. ಹಾಲಪ್ಪ(ಹೊಸನಗರ): ಮಾನ್ಯ ಅಧ್ಯಕ್ಷರೆ, ಹತ್ತು ನಿಮಿಷದಲ್ಲಿ ಹೇಳಿ ಮುಗಿಸಿಬಿಡುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ವಂದಿಸುತ್ತಾ ಇಂಧನ ಇಲಾಖೆ ಮೇಲೆ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಈ ಹಿಂದೆ ಇಂಧನ ಇಲಾಖೆ ಎಂದರೆ ಕೆ.ಇ.ಬಿ. ಎಂದು ಕರೆಯುತ್ತಿದ್ದೆವು. ಈಗ ಕೆ.ಇ.ಬಿ. ಹೋಗಿ ಕೆ.ಪಿ.ಟಿ.ಸಿ.ಎಲ್. ಎಂದಾಗಿದೆ ಕೆ.ಪಿ.ಟಿ.ಸಿ.ಎಲ್. ಹೋಗಿ ಐದು ವಿದ್ಯುತ್ ಕಂಪನಿಗಳಾಗಿವೆ. ಎಲ್ಲಾ ಗ್ರಾಮೀಣ ಪ್ರದೇಶಗಳಿಗೆ ವಿದ್ಯುತ್‌ನ್ನು ಕೊಡಬೇಕು ಮತ್ತು ಈ ವಿದ್ಯುತ್ ಇಲಾಖೆಯಲ್ಲಿ ಹೆಚ್ಚು ಸುಧಾರಣೆಗಳನ್ನು ತರಬೇಕು ಮತ್ತು ಹೆಚ್ಚು ಜನರಿಗೆ ವಿದ್ಯುತ್‌ನ್ನು ಕೊಡಬೇಕು ಎಂದು ಈ ಐದು ಕಂಪನಿಗಳನ್ನು ಮಾಡಿದರು ಎಂದು ನಾನು ತಿಳಿದುಕೊಂಡಿದ್ದೇನೆ. ಇಷ್ಟೆಲ್ಲಾ ಆದರೂ ಕೂಡ ಮಲೆನಾಡಿನ ಭಾಗದಲ್ಲಿ ಇಂದಿಗೂ ಸಾವಿರಾರು ಹಳ್ಳಿಗಳಲ್ಲಿ ಕರೆಂಟ್ ಇಲ್ಲ. ಹಳ್ಳಿ ಹಳ್ಳಿಗಳಿಗೇ ಇಲ್ಲ, ಕೇವಲ ಮನೆಗಳಿಗಲ್ಲ. ಉದಾಹರಣೆಗೆ ನನ್ನ ಮತಕ್ಷೇತ್ರದ, ಹೊಸನಗರ ತಾಲ್ಲೂಕು ಒಂದರಲ್ಲಿಯೇ ಇವ್ವೊತ್ತಿಗೂ 430 ಹೆಚ್ಚು ಹಳ್ಳಿಗಳಲ್ಲಿ ವಿದ್ಯುತ್ ಸಂಪರ್ಕವೇ ಇಲ್ಲ. ಈ ಮೊದಲು ಇನ್ನೂ 600 ರಿಂದ 700 ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಇರಲಿಲ್ಲ. ಆದರೆ ಈ ವರ್ಷ ಈ ಸರ್ಕಾರ ಮತ್ತು ಈಗಿನ ಮಂತ್ರಿಗಳಾದಂಥ ಶ್ರೀಮಾನ್ ರೇವಣ್ಣನವರು 127 ಹಳ್ಳಿಗಳಿಗೆ ಆರ್.ಇ.ಪಿ.ನಲ್ಲಿ ವಿದ್ಯುತ್ ಸಂಪರ್ಕಕ್ಕೆ ಸ್ಯಾಂಕ್ಷನ್ ಮಾಡಿಕೊಟ್ಟಿರುವುದರಿಂದ ಈಗ ಅಲ್ಲಿ ಕೆಲಸ ನಡೆಯುತ್ತಿದೆ. ಅಷ್ಟರಮಟ್ಟಿಗೆ ನಾನು ಸರ್ಕಾರಕ್ಕೆ ಮತ್ತು ಮಾನ್ಯ ಮಂತ್ರಿಗಳಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಈ 430 ಹಳ್ಳಿಗಳಿಗೆ ಆದಷ್ಟು ಬೇಗ ವಿದ್ಯುತ್‌ನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಿನ್ನೆ ಮೊನ್ನೆ ಮೂರ್ನಾಲ್ಕು ದಿನಗಳ ಹಿಂದೆ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಎಂಬ ಒಂದು ಹೊಸ ಯೋಜನೆಯನ್ನು ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಸೇರಿ ತಂದಿದ್ದಾರೆ. ಅದರಲ್ಲೂ ಕೂಡ ಈ ನಮ್ಮ ಹಳ್ಳಿಗಳಿಗೆ ವಿದ್ಯುತ್ ಬರುತ್ತದೆ ಎನ್ನತಕ್ಕಂಥ ಒಂದು ಖಾತರಿಯೇನೂ ಕಾಣುವುದಿಲ್ಲ. ಏಕೆಂದರೆ ಮಲೆನಾಡಿನಲ್ಲಿ ಎರಡು ಕಿಲೋಮೀಟರ್‌ಗೆ ಮೂರು ಕಿಲೋಮೀಟರ್‌ಗೆ ಒಂದೊಂದು ಹಳ್ಳಿಗಳು ಇದ್ದು ಮನೆಗಳು ವಿರಳವಾಗುತ್ತವೆ. ಅಲ್ಲೊಂದು ಇಲ್ಲೊಂದು ಮನೆಗಳು ಇರುತ್ತವೆ. ಅಲ್ಲಿ ಒಂದು

ಯುನಿಟ್ ಎಂದು ಮಾಡಿ ಒಂದು ಯುನಿಟ್‌ಗೆ 6 ಸಾವಿರ ರೂಪಾಯಿ ಎಂದು ಮಾಡಿದ್ದಾರೆ. 6 ಸಾವಿರ ರೂಪಾಯಿ ಎಂದು ಹೇಳಿದರೆ ಇಷ್ಟರಲ್ಲಿ ನಮ್ಮ ಹಳ್ಳಿಗಳಿಗೆ, ನಮ್ಮ ಮನೆಗಳಿಗೆ ಕರೆಂಟ್ ಬರುವುದಿಲ್ಲ. ಅದನ್ನು ಹೆಚ್ಚು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಹೆಚ್ಚು ಎಂದು ಹೇಳಿದರೆ ಒಂದು ಕಿಲೋಮೀಟರ್‌ಗೆ ಕರೆಂಟ್ ತೆಗೆದುಕೊಂಡು ಹೋಗಬೇಕು ಎಂದರೆ ಸುಮಾರು 18 ಕಂಬಗಳು ಬೇಕು. ಮಲೆನಾಡಿನಲ್ಲಿ ಎರಡು ಕಿಲೋಮೀಟರ್, ಮೂರು ಕಿ.ಲೋ.ಮೀಟರ್ ಎಂದು ಹೇಳಿದರೆ ಸುಮಾರು 50 ರಿಂದ 60 ಕಂಬಗಳು ಬೇಕಾಗುತ್ತವೆ. ಆದ್ದರಿಂದ 6 ಸಾವಿರ ರೂಪಾಯಿಯ ಟಾರ್ಗೆಟ್‌ನ್ನು ಇಟ್ಟುಕೊಂಡರೆ ಸಾಕಾಗುವುದಿಲ್ಲ. ಇದನ್ನು 20 ಸಾವಿರ ರೂಪಾಯಿಗಳಿಗೆ ಹೆಚ್ಚಿಸಬೇಕು. ಈ ಹೊಸ ಆರ್.ಇ.ಸಿ. ಸ್ಕೀಂನಲ್ಲಿ ಇದನ್ನು ಹೆಚ್ಚಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಈ ಮಲೆನಾಡಿನಲ್ಲಿ ಯಾರಿಗೆ ಕರೆಂಟ್ ಇಲ್ಲವೆಂದರೆ ಹೊಸನಗರ, ಸಾಗರ, ತೀರ್ಥಹಳ್ಳಿಯಂಥ ಹಳ್ಳಿಗಳಲ್ಲಿ ಕರೆಂಟ್ ಇಲ್ಲ ಈ ದೇಶದಲ್ಲಿ ವಿದ್ಯುತ್‌ನ್ನು ಯಾರು ಕೊಟ್ಟಿದ್ದಾರೆ, ಅಂದರೆ ಪ್ರಥಮವಾಗಿ ಶಿವನಸಮುದ್ರ ಬಿಟ್ಟರೆ ಬಹುಶಃ ಜೋಗ್‌ದಲ್ಲಿ, ಮಡೆನೂರ್ ಡ್ಯಾಂ, ಲಿಂಗನಮಕ್ಕಿ ಡ್ಯಾಂ ನಿಂದ ಈ ರಾಜ್ಯಕ್ಕೆ ವಿದ್ಯುತ್‌ನ್ನು ಕೊಟ್ಟಿದ್ದಾರೆ. ಆದರೆ ಇದರಿಂದ ಮುಳುಗಡೆಯಾದಂಥ ಪ್ರದೇಶದ ಜನರಿಗೇ ವಿದ್ಯುತ್ ಇಲ್ಲ. ಯಾರು ವಿದ್ಯುತ್‌ಗಾಗಿ ತ್ಯಾಗವನ್ನು ಮಾಡಿದ್ದಾರೆಯೋ ಯಾರು ನಿರಾಶ್ರಿತರಾಗಿದ್ದಾರೆ, ಅವರಿಗೇ ಈ ಕರೆಂಟ್‌ನ್ನು ಸರ್ಕಾರದವರು ಕೊಟ್ಟಿಲ್ಲ. ಮೂಲಭೂತ ಸೌಲಭ್ಯಗಳಲ್ಲಿ ವಿದ್ಯುತ್ ಕೂಡ ಅತಿ ಮುಖ್ಯವಾದುದು ಆದ್ದರಿಂದ ಹೆಚ್ಚಿನ ಆದ್ಯತೆ ಮೇರೆಗೆ ವಿದ್ಯುತ್‌ನ್ನು ಅವರಿಗೆ ಒದಗಿಸಿಕೊಡಲೇಬೇಕೆಂದು ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ. ಅದೇ ರೀತಿ ಈಗ 127 ಹಳ್ಳಿಗಳಲ್ಲಿ ಆರ್.ಇ.ಸಿ. ಸ್ಕೀಂನಲ್ಲಿ ಏನು ಕೆಲಸ ನಡೆಯುತ್ತಿದೆ ಅದಕ್ಕೆ ಅರಣ್ಯ ಇಲಾಖೆಯವರದ್ದು ಒಂದು ತಕರಾರು ಇದೆ, ಈ ವಿದ್ಯುತ್ ಲೈನ್‌ನ್ನು ತೆಗೆದುಕೊಂಡು ಹೋಗುವುದಕ್ಕೆ ಅವರು ಬಹಳ ತಕರಾರು ಮಾಡುತ್ತಾರೆ. ಒಂದೆರಡು ಮರಗಳು ಅಡ್ಡ ಬಂದರೆ ಅದನ್ನು ನಿಲ್ಲಿಸಿಬಿಡುವುದು; ಅದನ್ನು ಎಷ್ಟರಮಟ್ಟಿಗೆ ಮಾಡಿದ್ದಾರೆಂದರೆ ಅಧ್ಯಕ್ಷರೆ, ಕಂಟ್ರಾಕ್ಟರ್ ಮೇಲೆ ಮತ್ತು ಕೆ.ಇ.ಬಿ. ಯವರ ಮೇಲೆ ಮರ ಕಡಿಯುತ್ತಾರೆ ಎಂದು ಅರಣ್ಯ ಇಲಾಖೆಯವರು ಕೇಸ್ ಬುಕ್ ಮಾಡಿದ್ದಾರೆ. ಆದರೆ ಅವರು ಮರ ಕಡಿಯುವುದಿಲ್ಲ, ತೆರೆ (ಕೊಂಬೆಗಳನ್ನು) ಕಡಿಯುತ್ತಾರೆ, ತೆರೆ ಎಂದರೆ ಬ್ರ್ಯಾಂಚಸ್. ಆ ತೆರೆಗಳನ್ನು ಕಡಿಯುವುದಕ್ಕೂ ಅದಕ್ಕೆ ಅವಕಾಶ ಕೊಡಬೇಕೆಂದು ಅರಣ್ಯ ಇಲಾಖೆಯವರಲ್ಲಿ ಕೇಳಿಕೊಳ್ಳುತ್ತೇನೆ. ಯಾರು ವಿದ್ಯುತ್‌ಗಾಗಿ ತ್ಯಾಗ ಮಾಡಿದ್ದಾರೋ ಅವರಿಗೇ ಕರೆಂಟ್ ಇಲ್ಲವೆಂದು ಹೇಳಿದರೆ ಹೇಗೆ ಅವರಿಗೆ ಕೂಡಲೇ ವಿದ್ಯುತ್‌ನ್ನು ಒದಗಿಸಬೇಕು. ಈಗಾಗಲೇ ಹೊಸನಗರ ಮತ್ತು ತೀರ್ಥಹಳ್ಳಿ ಭಾಗದಲ್ಲಿ ನಕ್ಸಲೈಟ್ಸ್ ಅಲ್ಲಿಗೆ ಬಂದಿದ್ದಾರೆ, ಅವರಿಗೆ ಇವರು ಹೇಳುತ್ತಾರೆ ಅವರು ಇವರಿಗೆ ಪ್ರಚೋದನೆಯನ್ನು ಮಾಡುತ್ತಾರೆ. ಈಗ ನೋಡ್ರಿ ನಿಮ್ಮ ಊರಿಗೆ ವಿದ್ಯುತ್ ಇಲ್ಲ, ನಿಮ್ಮನ್ನು ಡ್ಯಾಂ ಕಟ್ಟಿ ಮುಳುಗಿಸಿದರು, ಆದರೆ ನಿಮಗೇ ವಿದ್ಯುತ್ ಕೊಡುವುದಿಲ್ಲ, ನೀವೇ ಈ ದೇಶಕ್ಕೆ, ಈ ರಾಜ್ಯಕ್ಕೆ ವಿದ್ಯುತ್ ಕೊಟ್ಟವರು ಎಂದು ಹೇಳಿ ಪ್ರಚೋದನೆಯನ್ನು ಮಾಡುತ್ತಾರೆ. ಆದುದರಿಂದ ಹೆಚ್ಚಿನ ಆದ್ಯತೆಯ ಮೇಲೆ ಈ ಜನರಿಗೆ ವಿದ್ಯುತ್‌ನ್ನು ಒದಗಿಸಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇನ್ನು ಅರಣ್ಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದೇನೆಂದರೆ, ಈ ಮೂಲಭೂತ ಸೌಲಭ್ಯಗಳನ್ನು ಹಾಗೂ ರಸ್ತೆಗಳನ್ನು ಮಲೆನಾಡಿನಲ್ಲಿ ಮಾಡಬೇಕಾಗಿದೆ. ಇದಕ್ಕೆ ಅರಣ್ಯ ಇಲಾಖೆಯವರ ತಕರಾರಿದೆ. ಇವರು

ಬೇರೆ ಯಾರು ಮರ ಕಡಿದುಕೊಂಡು ಹೋದರೂ ಕೇಳುವುದಿಲ್ಲ. ಯಾರು ಮರ ಕಡಿದು ಮಾರಿದರೂ ಕೇಳುವುದಿಲ್ಲ. ಅವರ ಹತ್ತಿರ ದುಡ್ಡೋ ಕಾಸೋ ತೆಗೆದುಕೊಂಡು ಅಥವಾ ಅವರವರೇ ವ್ಯವಹಾರ ಮಾಡಿಕೊಂಡು ಅವರು ಸರಿಹೋಗಿಬಿಡುತ್ತಾರೆ. ಆದರೆ ಯಾರು ರಸ್ತೆ ಮಾಡುವುದಕ್ಕೆ ಹೋಗ್ತೇವೆ, ಈಗ ಸರ್ಕಾರದ ಯೋಜನೆಯಲ್ಲಿ ಯಾರು ವಿದ್ಯುತ್ತನ್ನು ಕೊಡುವುದಕ್ಕೆ ಹೋಗ್ತೇವೆ, ಲೈನ್‌ಗಳನ್ನು ಎಳೆಯುವುದಕ್ಕೆ ಹೋಗ್ತೇವೆ ಅಂಥವರ ಮೇಲೆ ಕೇಸ್ ಹಾಕತಕ್ಕಂಥದ್ದು ಮಾಡುತ್ತಾರೆ. ಅರಣ್ಯ ಇಲಾಖೆಯವರು ಇನ್ನು ಮುಂದೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಾಗ ಯಾರು ಆ ಕೆಲಸ ಮಾಡುತ್ತಿರುತ್ತಾರೋ ಅವರಿಗೆ ತೊಂದರೆ ಮಾಡಬಾರದು ಎಂದು ನಾನು ವಿನಂತಿ ಮಾಡುತ್ತೇನೆ. ನಾನು ಒಂದು ಉದಾಹರಣೆ ಕೊಡುತ್ತೇನೆ. ನನ್ನ ಮತಕ್ಷೇತ್ರವಾದ ಹೊಸನಗರದಲ್ಲಿ ಒಂದು ರಸ್ತೆಗೆ ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆಯಲ್ಲಿ 42 ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿದೆ. ಕೋಟೆತಾರಗದಿಂದ ನಂಜುವಳ್ಳಿ ರಸ್ತೆ ಎಂದು, ಆ ರಸ್ತೆಯಲ್ಲಿ ಮರಗಳನ್ನು ಕ್ಲಿಯರ್ ಮಾಡುವುದಕ್ಕೆ ಸಂಬಂಧಪಟ್ಟ ಅರಣ್ಯ ಇಲಾಖೆಗೆ ನಮ್ಮ ಇಂಜಿನಿಯರ್‌ರವರು ಜಿಲ್ಲಾ ಪರಿಷತ್‌ನಿಂದ ಲೆಟರ್ ಬರೆದಿದ್ದಾರೆ. ಆರು ತಿಂಗಳಾಗಿದೆ ಅದಕ್ಕೆ ಇನ್ನೂ ಉತ್ತರ ಬಂದಿಲ್ಲ, ಈ ಅರಣ್ಯ ಇಲಾಖೆಯವರು ಮರಗಳನ್ನು ಕಡಿಯಿರಿ ಅಥವಾ ಕಡಿಯಬೇಡಿ ರಸ್ತೆ ಮಾಡಿ ಅಥವಾ ಮಾಡಬೇಡಿ ಎಂದು ಏನನ್ನೂ ಹೇಳಿಲ್ಲ. ಈಗ ನಮ್ಮ ಹತ್ತಿರ ದುಡ್ಡು ಇದೆ. ಆದರೆ ರಸ್ತೆ ಮಾಡಿಸುವುದಕ್ಕೆ ಆಗುತ್ತಿಲ್ಲ. ನೋಡಿ, ಇಷ್ಟರಮಟ್ಟಿಗೆ ಇವರು ತೊಂದರೆಯನ್ನು ಕೊಡುತ್ತಾರೆ. ಈ ಬಗ್ಗೆ ಹಿಂದೆ ಮಂತ್ರಿಗಳು ಬೇರೆ ಬೇರೆ ಸಂದರ್ಭಗಳಲ್ಲಿ ಸಭೆಯನ್ನು ಕರೆದಾಗ ನಾವೂ ಕೂಡ ಹೇಳಿದ್ದೇವೆ. ಈ ಮೂಲಭೂತ ಸೌಲಭ್ಯಗಳಿಗಾಗಿ ಏಕೆ ತೊಂದರೆ ಮಾಡುತ್ತೀರಿ ಎಂದು ಹೇಳುತ್ತೇನೆ ಎಂದು ಮಂತ್ರಿಗಳು ಹೇಳಿದರು. ಸರ್ಕಾರದವರು ಹೇಳಿದ್ದಾರೋ ಅಥವಾ ಬಿಟ್ಟಿದ್ದಾರೋ, ನಮಗಂತೂ ಆ ರಸ್ತೆ ಆಗಲಿಲ್ಲ. ಈ 127 ಹಳ್ಳಿಗಳಿಗೆ ವಿದ್ಯುತ್ ಕೊಡುವುದಕ್ಕೆ ಅಲ್ಲಲ್ಲೀ ಈ ಅರಣ್ಯ ಇಲಾಖೆ ತಡೆ. ಹೀಗಾದರೆ ಕೆಲಸ ಹೇಗಾಗುತ್ತದೆ? ಇದೆ ಬಗ್ಗೆ ಈ ಕೂಡಲೇ ಗಮನಹರಿಸಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಇನ್ನು ಬಗರ್‌ಹುಕುಂ ವಿಚಾರದಲ್ಲಿ ಅನೇಕ ತರಹ ಇದೆ. ಈ ಮಲೆನಾಡಿನ ಎರಡ್ಮೂರು ಜಿಲ್ಲೆಗಳಿಗೆ, ಎರಡ್ಮೂರು ತಾಲ್ಲೂಕುಗಳಿಗೆ ಸಂಬಂಧಪಟ್ಟ ಹಾಗೆ ಮತ್ತು ಈ ಶಿವಮೊಗ್ಗಾ ಜಿಲ್ಲೆಯದನ್ನು ಹೇಳುವುದಾದರೆ, ಈ ಡ್ಯಾಂಗಳನ್ನು ಕಟ್ಟಿದ್ದಾರಲ್ಲಾ, ಶರಾವತಿ, ಲಿಂಗನಮಕ್ಕಿ ಡ್ಯಾಂ, ಮಡೆನೂರು ಡ್ಯಾಂ, ಮತ್ತು ತಲಕಳ್ಳಿ ಡ್ಯಾಂ ಈ ಡ್ಯಾಂಗಳನ್ನು ಕಟ್ಟಿದಾಗ 1962ನೇ ಇಸವಿಯಲ್ಲಿ ಇಲ್ಲಿ ಯಾರು ಯಾರು ಮುಳುಗಡೆ ಆದರೋ ಅವರನ್ನೆಲ್ಲಾ ಕರೆದುಕೊಂಡು ಹೋಗಿ ಫಾರೆಸ್ಟ್ ಲ್ಯಾಂಡ್‌ನಲ್ಲಿ ಬಿಟ್ಟುಬಿಟ್ಟರು. ಫಾರೆಸ್ಟ್ ಲ್ಯಾಂಡ್‌ನಲ್ಲಿ ಆಗಿನ ಸರ್ಕಾರ ಕರೆದುಕೊಂಡು ಹೋಗಿ ಬಿಟ್ಟದ್ದು. ಅದರಲ್ಲಿ ನಾನೂ ಒಬ್ಬ, ನಮ್ಮ ತಂದೆ ತಾಯಿಗಳೂ ಕೂಡ ನಿರಾಶ್ರಿತರು. ನಮ್ಮನ್ನು ತೆಗೆದುಕೊಂಡು ಹೋಗಿ ಫಾರೆಸ್ಟ್‌ಗೆ ಬಿಟ್ಟರು, ನಿಮಗೆ ಬೇಕಾದಷ್ಟು ಮಾಡಿಕೊಳ್ಳಿ, ಹಿಂದಿನ ದಾಖಲಾತಿ ಪ್ರಕಾರ ನಿಮಗೆ ಎಷ್ಟು ಬೇಕೋ ಅಷ್ಟು ಮಾಡಿಕೊಳ್ಳಿ, ಅಂದರೆ ಎಷ್ಟು ಖಾತೆ, ಕಂದಾಯ ಇದೆ ಅದನ್ನು ಮಾಡಿಕೊಳ್ಳಿ ಎಂದರು. ನಾವು ಆ ಪ್ರಕಾರ ಮಾಡಿಕೊಂಡೆವು. ಸುಮಾರು 40, 42 ವರ್ಷಗಳಿಂದ ಅಲ್ಲಿಯೇ ಇದ್ದೇವೆ. ಆದರೆ ಈಗ ಹೇಳುತ್ತಾರೆ; ಇದು ಅರಣ್ಯ ಭೂಮಿ, ಈ ಬಗ್ಗೆ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಆಗಿದೆ, ನೀವು ಇಲ್ಲಿಂದ ಒಕ್ಕಲೇಳಬೇಕು, ಇಲ್ಲದಿದ್ದರೆ ಇದರಿಂದ ಜನರಿಗೆ ತೊಂದರೆಯಾಗುತ್ತದೆ ಎಂದು. ಆಗ ಮುಳುಗಡೆ ರೈತರನ್ನು ಸರ್ಕಾರ ತಂದು ಬಿಟ್ಟಿತು ಮತ್ತು ಸಾಗುವಳಿಯನ್ನು ಅರಣ್ಯದಲ್ಲಿ

ಮಾಡಿ ಎಂದು ಹೇಳಿದರು, ಮತ್ತು ಸ್ವಲ್ಪಮಟ್ಟಿಗೆ ಆ ಕಾಲದಲ್ಲಿ ಜಮೀನನ್ನು ರಿಲೀಸ್ ಮಾಡಿದರು. ರಿಲೀಸ್ ಮಾಡಿ ಕೆಲವು ಜನರಿಗೆ ಖಾತೆ ಕಂದಾಯ ಮತ್ತು ಅವರ ಜಮೀನು ಅವರಿಗಾಗಿದೆ. ಇನ್ನುಳಿದವರಿಗೂ ಕೂಡ ಅವರನ್ನು ಒಕ್ಕಲೆಬ್ಬಿಸದೇ ಇರುವ ರೀತಿಯಲ್ಲಿ ಮಾಡಬೇಕು. ಅವರಿಗೆ ಅಲ್ಲಿಯೇ ಅಕ್ರಮ–ಸಕ್ರಮ ರೀತಿಯಲ್ಲಿ ಸಕ್ರಮಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಇಂಥ 15 ಸಾವಿರ ಕುಟುಂಬಗಳಿವೆ. 15 ಸಾವಿರ ಕುಟುಂಬಗಳು ಮಡೆನೂರ್ ಡ್ಯಾಂ, ಲಿಂಗನಮಕ್ಕಿ ಡ್ಯಾಂ ತಲಕಳ್ಳೆ ಡ್ಯಾಂ, ಆಮೇಲೆ ಶರಾವತಿ ಕಡಣೆ ಜಲ ವಿದ್ಯುತ್ ಯೋಜನೆಯಲ್ಲಿ ನಿರಾಶ್ರಿತರಾದರು. ಇವರನ್ನು ಒಂದು ಕಾಲದಲ್ಲಿ ಸರ್ಕಾರದವರೇ ತಂದುಬಿಟ್ಟಿರುವುದರಿಂದ ಇವರು ಈಗ ಅಕ್ರಮ ಸಾಗುವಳಿಗಾರರಾಗಿದ್ದಾರೆ. ಸರ್ಕಾರಿ ಬಗರ್‌ಹುಕುಂದಾರರಾಗಿದ್ದಾರೆ ಎಂದು ಹೇಳಬಹುದೇನೋ. ಈ ರೀತಿ ಇದೆ. ಆದುದರಿಂದ ಅವರನ್ನು ಒಕ್ಕಲೆಬ್ಬಿಸದೇ ಇರುವ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಬೇಕು. ಅರಣ್ಯ ಇಲಾಖೆಯು ಅರಣ್ಯ ಕಾಯಿದೆಗೆ ತಿದ್ದುಪಡಿಯನ್ನು ತರುವುದರ ಮುಖಾಂತರ ಅವರನ್ನು ಒಕ್ಕಲೆಬ್ಬಿಸದೇ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ. ಇನ್ನು ಆರ್ಥಿಕ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಇದರಲ್ಲಿ ಅಬ್ಕಾರಿ ಇಲಾಖೆ ಬಗ್ಗೆ ಹೇಳುವುದಾದರೆ ಮೂರು ಕೋಟಿ ರೂಪಾಯಿಗಳಿಂದ ಮೂರು ಸಾವಿರ ಕೋಟಿ ರೂಪಾಯಿಗಳ ರೆವಿನ್ಯೂವರೆಗೆ ಇವೊತ್ತು ನಾವು ಮುಟ್ಟಿದ್ದೇವೆ. ಕೆಲವೇ ವರ್ಷಗಳ ಹಿಂದೆ 3 ಕೋಟಿ ರೂಪಾಯಿಗಳ ಅಬ್ಕಾರಿ ಆದಾಯ ಇತ್ತು. ಆದರೆ ಈ ಪರ್ಷ 3400 ಕೋಟಿ ರೂಪಾಯಿಗಳಾಗಿದೆ. ನಮ್ಮ ಸರ್ಕಾರದ ಗುರಿ 3000 ಕೋಟಿ ರೂ.ಗಳು ಇದ್ದರೆ 3400 ಕೋಟಿ ರೂಪಾಯಿಗಳಾಗಿದೆ. ಅದು ಯಾರಿಂದ ಬರುತ್ತದೆ? ಈ 3 ಕೋಟಿ ರೂ.ಗಳಿಂದ 3000 ಕೋಟಿ ರೂಪಾಯಿಗಳಾಯಿತಲ್ಲಾ, ಇದನ್ನು ಏನಾದರೂ ಉತ್ಪತ್ತಿ ಮಾಡಿ ನಾವು ರೆವಿನ್ಯೂ ಜಾಸ್ತಿ ಮಾಡಿಕೊಂಡಿದ್ದೇವಾ ಅಥವಾ ಈ ಭ್ರಷ್ಟಾಚಾರವನ್ನು ಮಾಡಿದ್ದೇವಾ ಅಥವಾ ದಕ್ಷತೆಯಿಂದ ಮಾಡಿದ್ದೇವಾ? ಇಲ್ಲ, ಈ 3000 ಕೋಟಿ ರೂಪಾಯಿಗಳನ್ನು ಯಾರು ಕೊಡುತ್ತಾರೆ? ಕುಡಿಯುವವರು ಕೊಡುತ್ತಾರೆ. ಅಂದರೆ ಕನಿಷ್ಠ ಜನ ಕೊಡುತ್ತಾರೆ. ಅದಕ್ಕೆ ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ಸರ್ಕಾರದ ಲೂಪ್‌ಹೋಲ್ಸ್ ಏನು? ಇವರು ಈ ಲೈಸೆನ್ಸ್‌ಗಳನ್ನು ಕೊಡುತ್ತಾರೆ. ಒಂದನೆಯದಾಗಿ ಅರ್ಯಾಕ್‌ನ್ನು ಕಂಟ್ರ್ಯಾಕ್ಟ್ ಮೂಲಕ ಹರಾಜು ಹಾಕುತ್ತಾರೆ. ಐ.ಎಂ.ಎಫ್.ಎಲ್.ನ್ನು ಲೈಸೆನ್ಸ್ ಮೂಲಕ ಕೊಡುತ್ತಾರೆ. ಅದಕ್ಕೆ ಸಿ.ಎಲ್. (1) ಸಿ.ಎಲ್. (2) ಸಿ.ಎಲ್. (3) ಸಿ.ಎಲ್. (4) ಎಂದು ಹೇಳುತ್ತಾರೆ. ಸಿಎಲ್ ಎಂದರೆ ಎಂಥದೋ ಏನೋ ಯಾರಿಗೂ ಗೊತ್ತಿಲ್ಲ. ಸಿ.ಎಲ್. ಎಂದರೆ ಏನು? ಕೆ.ಎಸ್.ಆರ್.ಟಿ.ಸಿ. ಎಂದರೆ ಕರ್ನಾಟಕ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಎಂದು ಇದೆ. ಸಿ.ಎಲ್. 1 ಎಂದು ಹೇಳುತ್ತಾರೆ ಆದರೆ ಅದು ಏನು ಎಂಬುದು ಯಾರಿಗೂ ಗೊತ್ತಿಲ್ಲ. ಹೋಲ್‌ಸೇಲ್ ಎಂದು ನಾವು ತಿಳಿದುಕೊಂಡಿದ್ದೇವೆ. ಸಿ.ಎಲ್.2 ಎಂದರೆ ರೀಟೇಲ್ ವೈನ್ ಶಾಪ್ ಅಂತೆ. ಸಿ.ಎಲ್. 4 ಎಂದರೆ ಕ್ಲಬ್ ಅಂತೆ. ಸಿ.ಎಲ್. 9 ಎಂದರೆ ಬಾರ್ ಅಂತೆ. ಆದರೆ ಇಲ್ಲಿ ತಾರತಮ್ಯ ಏನು ಮಾಡಿದ್ದಾರೆ ಅಂದರೆ ಏನೋ ಒಂದು ಹೆಸರು ಇಟ್ಟುಕೊಂಡಿದ್ದಾರೆ, ಇಟ್ಟುಕೊಳ್ಳಲಿ. ಸಿಎಲ್–9 ಎಂದರೆ ಬಾರ್ ಏನಿದೆ ಅದಕ್ಕೆ ಲೈಸೆನ್ಸ್ ಫೀ 3,45,000 ರೂಪಾಯಿ ಸೆಸ್ ಎಲ್ಲಾ ಸೇರಿ ಆಗುತ್ತದೆ. ಅದೇ ಶ್ರೀಮಂತರು, ಉನ್ನತಾಧಿಕಾರಿಗಳು ಎಲ್ಲರೂ ಕುಡಿಯತಕ್ಕಂಥ ಬೆಂಗಳೂರಿನಲ್ಲಿ ಇರತಕ್ಕಂಥ ನೂರಕ್ಕಿಂತ ಹೆಚ್ಚು

ಕ್ಲಬ್‌ಗಳಿವೆಯಲ್ಲಾ ಅವುಗಳಿಗೆ ಲೈಸೆನ್ಸ್ ಫೀ ಎಷ್ಟು ಮಾಡಿದ್ದಾರೆ ಅಂದರೆ 1,72,000 ರೂಪಾಯಿಗಳು. ಜನಸಾಮಾನ್ಯರು, ಬಡವರು, ಸಾಧಾರಣ ಜನ ಹೋಗಿ ಕುಡಿಯತಕ್ಕಂಥ ಬಾರುಗಳಿಗೆ 3,50,000 ಲಕ್ಷ ರೂಪಾಯಿಗಳು! ನಾವು ಮೊನ್ನೆ ಶಾಸಕರ ದಿನಾಚರಣೆ ದಿವಸ ಕ್ರಿಕೆಟ್ ಕ್ಲಬ್‌ಗೆ ಹೋಗಿದ್ದೆವು, ಎಲ್ಲಾ ಕರೆದುಕೊಂದು ಹೋಗಿದ್ದರು. ಅಲ್ಲಿ ಹೋದಾಗ ಕಾರ್ ಪಾರ್ಕಿಂಗ್ ಮಾಡಿ ಆಚೆ ದಾಟಿ ಹೋದರೆ ಅಲ್ಲಿ ಒಂದು ಲೋಕವೇ ಬೇರೆ ಇದೆ. ನಾವು ಹೋದ ಗೇಟ್‌ನಲ್ಲಿ ನಮ್ಮನ್ನು ಬೆಡಲಿಲ್ಲ, ಆಚೆ ಕಾರು ನಿಲ್ಲಿಸಿದೆವು, ಆ ಕಡೆ ಹೋದೆವು. ಅಲ್ಲಿ ಹೋಗಿ ನೋಡಿದರೆ ನಾವು ಈ ಕರ್ನಾಟಕದಲ್ಲಿ ಇಲ್ಲವೇನೋ ಎಂದು ಅನಿಸುತ್ತದೆ. ಅದು ಒಂದು ರೀತಿಯಲ್ಲಿ ಕೊಯ ಕೊಯ ಅಟಾಚಿ ಇದ್ದಹಾಗೆ. ಅವರು ಯಾವ ಭಾಷೆಯಲ್ಲಿ ಮಾತನಾಡುತ್ತಿದ್ದರೋ ಏನೋ, ಆ ಕ್ಲಬ್, ಆ ಜನವೇ ಬೇರೆ. ಅಂತಹವರಿಗೆ ಏಕೆ ನೀವು ಒಂದೂವರೆ ಲಕ್ಷ ರೂಪಾಯಿ ಲೈಸೆನ್ಸ್ ಫೀ ಕಡಿಮೆ ಮಾಡಿದ್ದೀರಿ? ಮೂರೂವರೆ ಲಕ್ಷ ರೂಪಾಯಿ ಲೈಸೆನ್ಸ್ ಫೀ ಇಲ್ಲಿಯವರೆಗೆ ಸಾಧಾರಣ ಜನ ಕುಡಿಯತಕ್ಕಂಥ ಬಾರುಗಳಿಗೆ. ಕ್ಲಬ್‌ನವರಿಗೆ ಒಂದೂವರೆ ಲಕ್ಷ ರೂಪಾಯಿ ಏಕೆ ಈ ತಾರತಮ್ಯ ಮಾಡಿದ್ದೀರಿ? ಇಲ್ಲಿ ಸರ್ಕಾರದ ದುಡ್ಡು ಎಷ್ಟು ಹೋಗುತ್ತದೆ? ನೂರು ಕ್ಲಬ್ಬುಗಳು ಎಂದು ಇಟ್ಟುಕೊಂಡರೂ ಕೂಡ ಒಂದೂವರೆ ಕೋಟಿ ರೂಪಾಯಿ ಹೋಗುತ್ತದೆ. ಏಕೆ ಈ ತಾರತಮ್ಯ? ಇಂತಹ ಸಾವಿರಾರು ಕ್ಲಬ್ಬುಗಳು ನಮ್ಮ ಇಡೀ ರಾಜ್ಯದಲ್ಲಿ ಇವೆ. ಏಕೆ ಆ ರೀತಿ ಕೊಡುತ್ತಾರೆ? ಯಾರು ಕ್ಲಬ್ಬಿಗೆ ಹೋಗುವುದು? ಶ್ರೀಮಂತರು. ಮತ್ತೊಂದು ತಾರತಮ್ಯ ಅಂದರೆ ಬೆಂಗಳೂರಿನಲ್ಲಿ ಲೈಸೆನ್ಸ್ ಕೊಟ್ಟಿದ್ದಾರಲ್ಲಾ, ಒಂದೇ ರಸ್ತೆಯ ಎರಡು ಬದಿಗಳಲ್ಲಿ ಬಲಭಾಗಕ್ಕೆ 3,50,000 ಲಕ್ಷ ರೂಪಾಯಿ ಲೈಸೆನ್ಸ್ ಫೀ, ಎಡಭಾಗಕ್ಕೆ 2 ಲಕ್ಷ ರೂ. ಲೈಸನ್ಸ್ ಫೀ. ಒಂದೇ ರಸ್ತೆಯ ಎರಡು ಬದಿಗಳಿಗೆ ಬೇರೆಬೇರೆ ಲೈಸೆನ್ಸ್ ಫೀ ಫಿಕ್ಸ್ ಮಾಡಿದ್ದಾರೆ. ಅದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೋ ಗೊತ್ತಿಲ್ಲ. ಬೆಂಗಳೂರು ಸಾಕಷ್ಟು ಅಭಿವೃದ್ಧಿಯಾಗಿದೆ: ಅಂದರೆ ಅವರು ಹೇಳುತ್ತಾರೆ ಕಾರ್ಪೊರೇಷನ್‌ಗೆ ಮೂರೂವರೆ ಲಕ್ಷ, ರೂ. ಮತ್ತು ಸಿಎಂಸಿ ಎಂದು ಮಾಡಿದ್ದು, ಇನ್ನೊಂದು ಭಾಗಕ್ಕೆ ಕಡಿಮೆ ಲೈಸೆನ್ಸ್ ಫೀ. ಆದರೆ ರೇಟ್ ಏನು ಫಿಕ್ಸ್ ಮಾಡಿದ್ದಾರೆ ಪ್ರತಿ ಬಾಟಲ್ ಮೇಲೆ ಒಂದೇ ರೇಟ್ ಫಿಕ್ಸ್ ಮಾಡಿದ್ದಾರೆ. ಅಂಥಾದ್ದು 600 ರಿಂದ 700 ಅಂಗಡಿಗಳು ಇವೆ ಎಂದು ಒಂದು ಅಧ್ಯಯನ ಹೇಳುತ್ತದೆ. ಆ 600–700 ಅಂಗಡಿಗಳಿಂದ ಸುಮಾರು 8–9 ಕೋಟಿ ರೂಪಾಯಿ ಹಣ ಸರ್ಕಾರಕ್ಕೆ ನಷ್ಟವಾಗುತ್ತದೆ. ಇದರ ಕಡೆ ಇಲಾಖೆ ಗಮನ ಹರಿಸಬೇಕು. ಏಕೆ ಈ ರೀತಿ ಮಾಡುತ್ತಾರೋ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೇ, ಯಾರೂ ಅಬಕಾರಿ ಇಲಾಖೆಯ ಮೇಲೆ ಮಾತನಾಡಿಲ್ಲವೆಂದು ಕಾಣುತ್ತದೆ. ಇನ್ನು ಮಾತನಾಡುವವರು ಮುಂದೆ ಇದ್ದಾರೆ ಎಂದು ಕಾಣುತ್ತದೆ. 3 ಕೋಟಿ ರೂ. ಯಿಂದ 3 ಸಾವಿರ ಕೋಟಿ ರೂ. ಅಯಿತು. ಈ ವರ್ಷ 3,400 ಕೋಟಿ ರೂ. ಆಗಿದೆ, ಎಲ್ಲಿಂದ ಬರುತ್ತದೆ ಈ ಹಣ? ಉದಾಹರಣೆಗೆ ಒಂದು ದಿನಕ್ಕೆ ನಮ್ಮ ಶಿವಮೊಗ್ಗ ಜಿಲ್ಲೆಯೊಂದರಲ್ಲಿ 21 ಲಕ್ಷ ರೂ. ಸಾರಾಯಿ ಅರ್ಯಾಕ್‌ನಿಂದ ಬರುತ್ತದೆ. ಬೆಂಗಳೂರು ಒಂದು ಜಿಲ್ಲೆಯಿಂದ 55 ಲಕ್ಷ ರೂ. ಒಂದು ದಿನಕ್ಕೆ ಸಾರಾಯಿ ಕುಡಿಯುವವರಿಂದ ಬರುತ್ತದೆ. ಅವರನ್ನು ನಾವು ಶೋಷಣೆ ಮಾಡುತ್ತಿದ್ದೇವೆ. ಅವರಿಗೆ ಕುಡಿಯುವುದಕ್ಕೆ ಕೊಟ್ಟು, ಅವರಿಗೆ ಕುಡಿಸಿ, ಅವರ ದೌರ್ಬಲ್ಯವನ್ನು ಉಪಯೋಗಿಸಿಕೊಂಡು, ಅವರನ್ನು ಶೋಷಣೆ ಮಾಡಿ ಅವರಿಂದ ಹಣವನ್ನು ಪಡೆದು ಅವರ ಮಕ್ಕಳಿಗೇ ಬಿಸಿ ಊಟ, ಅವರ ಮಕ್ಕಳಿಗೇ ಪುಕ್ಕಟೆ ಪುಸ್ತಕ, ಅವರ ಮಕ್ಕಳಿಗೇ ಪುಕ್ಕಟೆ ಬಟ್ಟೆ ಕೊಟ್ಟು ನಾವು ಮೋಸ ಮಾಡುತ್ತಿದ್ದೇವೆ, ಮತ್ತೆ ನಾವು ಭಾಷಣ ಮಾಡುವುದನ್ನು

ಬಿಡುವುದಿಲ್ಲ; ಯಾರಿಂದ ಈ ದುಡ್ಡೆಲ್ಲಾ ಬರುವುದು? ಈ ದರಿದ್ರ ನಾರಾಯಣರಿಂದ ಬರುತ್ತದೆ, ಈ ಅಹಿಂದ ಅವರಿಂದ ಬರುತ್ತದೆ. ಅಂದರೆ ಹಿಂದುಳಿದವರು, ಎಸ್‌ಸಿ;ಎಸ್‌ಟಿ ಕೂಲಿಕಾರರಿಂದ ಬರುತ್ತದೆ. ನಾವು ಬಡವರ ದುಡ್ಡನ್ನು ಶೋಷಣೆ ಮಾಡುತ್ತಿದ್ದೇವೆ. ಎಲ್ಲಿಂದ ಬಂತು? ಈ ವರ್ಷ ಯಾರೋ ಒಬ್ಬ ಅಧಿಕಾರಿ ಇದ್ದಾರೆ 3 ಸಾವಿರ ಇರುವುದನ್ನು 3400 ಕೋಟಿ ರೂ, ಮಾಡಿದ್ದಾರೆ. ಇನ್ನೊಬ್ಬ ಅಧಿಕಾರಿಯನ್ನು ಹಾಕಿ 4,000 ಕೋಟಿ ರೂ ಕೊಡುತ್ತೀಯೇನಯ್ಯ ಎಂದು ಹೇಳಿ ಅವರು 4,000 ಕೋಟಿ ರೂ. ಕೊಡುತ್ತಾರೆ. ಹೇಗೆ ಕೊಡುತ್ತಾರೆ ಎಂದರೆ ಜಾಸ್ತಿ ಕುಡಿಸುತ್ತಾರೆ. ಅಬಕಾರಿ ಇಲಾಖೆ ಇದೆಯಲ್ಲಾ ಇದರ ಮೂಲ ಉದ್ದೇಶವೇನು? ಅದು ರೆಗ್ಯುಲೇಟರಿ ಡಿಪಾರ್ಟ್‌ಮೆಂಟ್. ಮೂಲತಃ ಕುಡಿಯುವುದನ್ನು ನಿಯಂತ್ರಣ ಮಾಡುವುದು. ಆದರೆ ಅದು ಇವತ್ತು ಏನಾಗಿದೆ? ರೆವಿನ್ಯೂ ಇಲಾಖೆಯಾಗಿದೆ. ಬಂಧುಗಳೇ, ...

ಅಧ್ಯಕ್ಷರು: ಏನ್ರಿ, ಯಾರನ್ನು ಅಡ್ರೆಸ್ ಮಾಡುತ್ತಿದ್ದೀರಿ? ಇದೇನು . . .

ಶ್ರೀ ಹೆಚ್. ಹಾಲಪ್ಪ: ಕ್ಷಮಿಸಬೇಕು, ಹೊಸ ಸದಸ್ಯರು.

ಅಧ್ಯಕ್ಷರು: ಆಯಿತು, ದಯಮಾಡಿ ನಿಲ್ಲಿಸಿ. ಎಷ್ಟು ಹೇಳಿದರೂ ಕೂಡ ಈ ರೀತಿ ಮಾಡಿದರೆ . . .

ಶ್ರೀ ಹೆಚ್. ಹಾಲಪ್ಪ: ಮಾನ್ಯ ಅಧ್ಯಕ್ಷರೆ, ಇಷ್ಟು ಹೇಳಿ, ಇದರ ಬಗ್ಗೆ ಗಮನ ಹರಿಸಬೇಕು, ಸರ್ಕಾರ ಸೋರಿ ಹೋಗುತ್ತಿರುವ ಇನ್‌ಕಂ ಅನ್ನು ಕ್ರೋಢಿಕರಿಸಬೇಕೆಂದು ವಿನಂತಿಯನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಧರ್ಮೇಗೌಡರೇ ಐದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮೂರು ದಿವಸದಿಂದ ಕಾಯುತ್ತಿದ್ದೇನೆ.

ಅಧ್ಯಕ್ಷರು: ಆಯಿತು ಕೊಡುತ್ತೇನೆ, ಅವರಿಗೆ 5 ನಿಮಿಷ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಸರ್ಕಾರ ಇದೆಯಾ ನೋಡಿ.

ಅಧ್ಯಕ್ಷರು: ಮಾನ್ಯ ಧರ್ಮೇಗೌಡರೇ, ಐದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಎಸ್.ಎಲ್. ಧರ್ಮೇಗೌಡ: ಮಾನ್ಯ ಸಭಾಧ್ಯಕ್ಷರಿಗೆ . . .

(ಗೊಂದಲ)

ಅಧ್ಯಕ್ಷರು: ಎಲ್ಲರೂ ಸಮಯ ಕೇಳುತ್ತಿದ್ದಾರೆ, ಈಗ ಐದೈದು ನಿಮಿಷನೂ ಮುಖ್ಯ. ಐದು ನಿಮಿಷದಲ್ಲಿ ಮುಗಿಸಬೇಕು ಧರ್ಮೇಗೌಡರೇ, ತಮಗೆ ಅವಕಾಶ ಕೊಡುತ್ತೇನೆ ಅವರದ್ದು ಆಗಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ನಿನ್ನೇನೇ ಹೇಳಿದಿರಿ.

ಅಧ್ಯಕ್ಷರು: ಹೇಳಿದಿರಿ, ಅವರದ್ದು ಆದಮೇಲೆ ಕೊಡುತ್ತೇನೆ.

ಶ್ರೀ ಎಸ್.ಎಲ್. ಧರ್ಮೇಗೌಡ(ಬಿರೂರು): ಮಾನ್ಯ ಅಧ್ಯಕ್ಷರೆ, ತಾವು ನನಗೆ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟೆದ್ದಕ್ಕೆ ತಮಗೆ ವಂದನೆಗಳನ್ನು ಹೇಳುತ್ತೇನೆ. ನನಗೆ ತಾವು ಮಾತನಾಡಿ ಎಂದು ಹೇಳಿದಿರಿ, ಆದರೆ ಸಂಬಂಧಪಟ್ಟಂತಹ ಮಂತ್ರಿಗಳು ಒಬ್ಬರೂ ಇಲ್ಲ. ಅದಕ್ಕೆ ಬಹಳ ಬೇಸರವಾಗುತ್ತಿದೆ. ಈಗಾಗಲೇ ಬಹುತೇಕವಾಗಿ ಎಲ್ಲಾ ಸದಸ್ಯರುಗಳು ಬಹಳಷ್ಟು

ಗ್ರಾಮಪಂಚಾಯತಿ ಹಾಗೂ ಜಿಲ್ಲಾ ಪಂಚಾಯಿತಿ ಮಟ್ಟದಿಂದ ಬಂದಿದ್ದಾರೆ ಎಂದು ಭಾವಿಸಿದ್ದೇನೆ. ಆದರೆ ಒಂದು ವಿಚಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಗೆ ಸಂಬಂಧಪಟ್ಟ ಹಾಗೆ ಹೇಳಬೇಕಾದರೆ, ಪ್ರತಿಯೊಂದು ಕಡೆಗಳಲ್ಲಿ ಸಹ ಗ್ರಾಮಪಂಚಾಯಿತಿಗಳಲ್ಲಿ ನೀವು ಗ್ರಾಮಸಭೆಗಳನ್ನು ಮಾಡಬೇಕು ಎನ್ನುವ ಕಾಯಿದೆಯನ್ನು ಮಾಡಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆಯಾಗುತ್ತಿದೆ.

ಅಧ್ಯಕ್ಷರು: ತಡೆಯಿರಿ, ಅವರು ಮಾತನಾಡಿ ಮುಗಿಸಲಿ, ನಮಗೆ ಐದೈದು ನಿಮಿಷ ಕೂಡ ಮುಖ್ಯ ಇದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆಯಾಗುತ್ತಿದೆ, ಗ್ರಾಮೀಣಾಭಿವೃದ್ಧಿ ಸಚಿವರು ಮೂರು ದಿವಸಗಳಿಂದ ಇಲ್ಲ.

ಅಧ್ಯಕ್ಷರು: ನಾನು ಏನು ಮಾಡಬೇಕು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹಾಗಾದರೆ ಸದನಕ್ಕೆ ಘನತೆ ಗೌರವ ಬೇಡವೆ? ಅಧಿಕಾರಿಗಳು ಇಲ್ಲ, ಮಂತ್ರಿಗಳು ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಕಂಟಿನ್ಯೂ ಆಗಿದ್ದಾರಾ ಅಥವಾ ಬಿಟ್ಟು ಹೋಗಿದ್ದಾರಾ?

ಅಧ್ಯಕ್ಷರು: ಸದಸ್ಯರುಗಳು ಐದತ್ತು ನಿಮಿಷ ಮಾತನಾಡಲಿ ಎಂದರೆ ಮಧ್ಯದಲ್ಲಿ ನಿಂತುಕೊಂಡು ನೀವು . . . ಆಯಿತು ಕುಳಿತುಕೊಳ್ಳಿರಿ. ಮಾನ್ಯ ಸಚಿವರು ಬರುತ್ತಾರೆ, ಕುಳಿತುಕೊಳ್ಳಿ ಹೇಳಿಕಳುಹಿಸಿದೇನೆ. . . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಗ್ರಾಮೀಣಾಭಿವೃದ್ಧಿ ಸಚಿವರು ಮೂರು ದಿವಸದಿಂದ ಇಲ್ಲಿ ಇಲ್ಲ. ಮೂರು ದಿವಸದಿಂದ ಪತ್ತೆ ಇಲ್ಲ.

ಅಧ್ಯಕ್ಷರು: ನೀವು ಮಧ್ಯ ಮಧ್ಯದಲ್ಲಿ ನಿಂತು ಕಾಲ ಹಾಳು ಮಾಡುವುದು. ಹೊಸಬರಿಗೆ ಅವಕಾಶ ಸಿಗುವುದಿಲ್ಲ. ಅವರೆಲ್ಲಾ ಗಲಾಟೆ ಮಾಡುವುದು; ಏನಿದು? ಮಾತನಾಡಿ, ಐದು ನಿಮಿಷದಲ್ಲಿ [illegible]

ಅಧ್ಯಕ್ಷರು: ಅವರು ಬರುತ್ತಾರೆ, ಹೇಳಿಕಳುಹಿಸಿದ್ದೇನೆ. ಈಗ ಸಚೇತಕರು ಬರುತ್ತಿದ್ದಾರೆ. ಪ್ರತಿಯೊಂದಕ್ಕೂ ಹೀಗೆ ಕಾಲ ಹಾಳು ಮಾಡಿಬಿಟ್ಟರೆ ಏನು ಮಾಡುವುದು? ಮಾತನಾಡಿ, ಹೊಸಬರು ನಿಂತಿದ್ದಾರೆ, ಮಾತನಾಡುತ್ತಾರೆ ಕುಳಿತುಕೊಳ್ಳಿ. ಮಂತ್ರಿಗಳು ಬರುತ್ತಾರೆ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ನೀವು ಅನೇಕ ಸಾರಿ ಹೇಳಿದ್ದೀರಿ, ನಾನೂ ಹೇಳಿದ್ದೇನೆ, ಆಯಿತು ಕುಳಿತುಕೊಳ್ಳಿ ನೀವು ಬಂದಿದ್ದೀರಲ್ಲಾ ಸಾಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸದನವನ್ನು ಮುಂದೂಡಿ ಬೇಕಾದರೆ; ಅವರೆಲ್ಲಾ ಬರಲಿ. ಅವರ ಆಂತರಿಕ ಒಳಜಗಳ ಕಚ್ಚಾಟದಿಂದ ಈ ಸದನಕ್ಕೆ ಹೇಳುವವರಿಲ್ಲ, ಕೇಳುವವರಿಲ್ಲ.

ಅಧ್ಯಕ್ಷರು: ಮಂತ್ರಿಗಳಿಗೆ ಬರುವುದಕ್ಕೆ ಹೇಳಿದ್ದೇನೆ, ಮಂತ್ರಿಗಳು ಬರುತ್ತಾರೆ. ದಯಮಾಡಿ ತಾವು ಕುಳಿತುಕೊಳ್ಳಿ. ಮಾತನಾಡುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಾವು ಪ್ರತಿದಿನ ಬಂದು ಕುಳಿತುಕೊಳ್ಳುತ್ತೇವೆ. ಒಂದು ದಿನ ಗೈರು ಹಾಜರಾಗಿಲ್ಲ ಅವರು ಎಲ್ಲಿದ್ದಾರೆ ಹೇಳಿ?

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇಲ್ಲ; ಅದನ್ನು ನಾನು ಒಪ್ಪುವುದಿಲ್ಲ.

ಅಧ್ಯಕ್ಷರು: ಈಗ ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು. ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಿ. ಇವತ್ತು ಬಹಳ ಜನ ಮಾತನಾಡಬೇಕೆಂದು ಇದ್ದಾರೆ. ಇಲ್ಲಿ ಇನ್ನೂ ಕೆಲವು ಹಿರಿಯ ಮುಖಂಡರುಗಳೂ ಸಹ ಮಾತನಾಡಿಲ್ಲ. ನಾನು ಇವತ್ತು ಒಂದೆರಡು ಗಂಟೆಗಳ ಕಾಲ ಮಾತನಾಡಲು ಅವಕಾಶ ಕೊಡುತ್ತೇನೆ. ಮಧ್ಯಾಹ್ನ ಮಂತ್ರಿಗಳು ಉತ್ತರ ಕೊಡುತ್ತಾರೆ. ಇವತ್ತು 15 ಜನ ಮಂತ್ರಿಗಳು ಉತ್ತರ ಕೊಡಬೇಕು. ಇದು ಇವತ್ತು ಮುಗಿಯಬೇಕು, ನಾಳೆ ಆ ಹೌಸ್‌ಗೆ ಹೋಗಬೇಕು. ನಾನು ಈಗ ಮಂತ್ರಿಗಳಿಗೆ ಹೇಳಿ ಕಳುಹಿಸಿದ್ದೇನೆ, ಮಂತ್ರಿಗಳು ಬರುತ್ತಾರೆ. ಸ್ವಲ್ಪ ಸಹಕಾರ ಕೊಡಿ. ಎಲ್ಲರೂ ಮಾತನಾಡಲಿ ದಯಮಾಡಿ, ವಾಟಾಳ್ ನಾಗರಾಜ್‌ರವರೆ, ಗಂಭೀರತೆ ಅರ್ಥ ಮಾಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಕೈಮುಗಿದು ಹೇಳುತ್ತೇನೆ, ಅವರಿಗೆ ಬರುವುದಕ್ಕೆ ಹೇಳಿ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ನಾವು ಅರ್ಥ ಮಾಡಿಕೊಳ್ಳುವುದಲ್ಲ, ಅವರು ಅರ್ಥ ಮಾಡಿಕೊಳ್ಳಬೇಕು. ಗ್ರಾಮೀಣಾಭಿವೃದ್ಧಿಗೆ 600 ಕೋಟಿ ರೂಪಾಯಿ ಬಜೆಟ್ ಇದೆ. ಗ್ರಾಮೀಣಾಭಿವೃದ್ಧಿ ಸಚಿವರು ನಾಲ್ಕು ದಿವಸದಿಂದ ಸೀಟಿನಲ್ಲಿಲ್ಲ 600 ಕೋಟಿ ರೂಪಾಯಿ ಬಜೆಟ್ ಅದು. ಅದನ್ನು ಮಂಜೂರು ಮಾಡಬೇಕು. ಮೂರು ದಿನಸದಿಂದ ಸಚಿವರು ಇಲ್ಲ ಇಲ್ಲಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಮಾತನಾಡುತ್ತಾರೆ. ಧರ್ಮೇಗೌಡರೇ, ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಎಸ್.ಎಲ್. ಧರ್ಮೇಗೌಡ: ಮಾನ್ಯ ಅಧ್ಯಕ್ಷರೆ, 10 ನಿಮಿಷದಲ್ಲಿ ಮುಗಿಸಿ ಬಿಡುತ್ತೇನೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬಹುತೇಕವಾಗಿ ಇಲ್ಲಿ ಇರತಕ್ಕಂಥವರೆಲ್ಲರೂ ಸಹ ಗ್ರಾಮ ಪಂಚಾಯಿತಿಯಿಂದ ಮತ್ತು ಜಿಲ್ಲಾ ಪಂಚಾಯಿತಿಯಿಂದ ಬಂದಿದ್ದಾರೆಂದು ನಾನು ಭಾವಿಸಿದ್ದೇನೆ. ಆದರೆ ಒಂದು ವಿಚಾರ. ಗ್ರಾಮಸಭೆಗಳನ್ನು ಮಾಡಬೇಕೆಂದು ಇಲಾಖೆಯಿಂದ ಕಡ್ಡಾಯ ಮಾಡುತ್ತಿದ್ದಾರೆ. ಆದರೆ ಗ್ರಾಮಸಭೆಗಳಲ್ಲಿ ಅದು ಸಾಧ್ಯತೆ ಇದೆಯೇ ಎಂಬುದು ಯೋಚನೆ ಮಾಡಬೇಕಾಗುತ್ತದೆ. ಪ್ರತಿಯೊಂದು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಒಬ್ಬ ಶಾಸಕನ ಕ್ಷೇತ್ರ ವ್ಯಾಪ್ತಿಯಲ್ಲಿ ಒಂದೇ ದಿನ ನಾಲ್ಕೈದು ಗ್ರಾಮಸಭೆಗಳನ್ನು ಮಾಡುವುದಕ್ಕೆ ಶುರು ಮಾಡುತ್ತಾರೆ. ಆ ಸಂದರ್ಭದಲ್ಲಿ ಸಂಬಂಧಪಟ್ಟಂತಹ ಇಲಾಖೆಯ ಎಲ್ಲಾ ಅಧಿಕಾರಿಗಳು ಅದರಲ್ಲಿ ಭಾಗವಹಿಸುವುದಕ್ಕಾಗುವುದಿಲ್ಲ. ಆದುದರಿಂದ ಸುಮ್ಮನೆ ನಾಮಕಾವಸ್ಥೆ ಗ್ರಾಮಸಭೆಗಳನ್ನು ಮಾಡಿ, ಅಲ್ಲಿ ಚೀಫ್ ಸೆಕ್ರೆಟರಿಯವರು ಕುಳಿತುಕೊಂಡು ಜಿಲ್ಲಾಪಂಚಾಯಿತಿಯಲ್ಲಿ, ಒಂದು ದಿನಾಂಕವನ್ನು ನಿಗದಿ ಮಾಡಿ ಕೇವಲ 20 ದಿವಸದ ಒಳಗಡೆ ಇಡೀ ಜಿಲ್ಲೆಯ ಎಲ್ಲಾ ಗ್ರಾಮಸಭೆಗಳನ್ನು ಮುಗಿಸಿಬಿಡಿ ಎಂದು ಹೇಳುತ್ತಾರೆ. ಆಗ ಸಂಬಂಧಪಟ್ಟಂತಹ 17, 18, ಇಲಾಖೆಯ ಅಧಿಕಾರಿಗಳು

ಅಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ. ಎಲ್ಲಾ ಜನರು ಅಲ್ಲಿ ಭಾಗವಹಿಸುವುದಕ್ಕೆ ಆಗುವುದಿಲ್ಲ, ಮತ್ತೆ ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಯಾವುದೇ ರೀತಿಯಾದಂತಹ ಕೆಲಸವನ್ನು ತೆಗೆದುಕೊಳ್ಳಬೇಕಾದರೆ, ಗ್ರಾಮ ಪಂಚಾಯತ್ ಮತ್ತು ಗ್ರಾಮಸಭೆಯ ಮುಖಾಂತರ ಆಗಬೇಕೆನ್ನುವಂಥಾದ್ದರ ಬಗ್ಗೆ, ವಾರ್ಡ್‌ಸಭೆಗಳ ಮುಖಾಂತರ ಆಗಬೇಕೆಂಬ ಕಾಯಿದೆ ಇದೆ. ತಾವು ದಯಮಾಡಿ ಗ್ರಾಮ ಸಭೆಗಳನ್ನು ವ್ಯವಸ್ಥಿತವಾಗಿ ನಡೆಸುವಂಥಾದ್ದೇ ಆದರೆ, ಅದಕ್ಕೆ ಒಂದು ನಿಗದಿತವಾದ ದಿನಾಂಕವನ್ನು ಕೊಡುವುದರ ಜೊತೆಗೆ ಎಲ್ಲಾ ಅಧಿಕಾರಿಗಳು ಇಲ್ಲಿ ಭಾಗವಹಿಸುವಂತಹ ಅವಕಾಶವನ್ನು ಮತ್ತು ಜನ ಪ್ರತಿನಿಧಿಗಳು ಭಾಗವಹಿಸುವಂತಹ ರೀತಿಯಲ್ಲಿ ದಿನಾಂಕಗಳನ್ನು ಮತ್ತು ಅವಕಾಶಗಳನ್ನು ಸರಿಯಾದಂತಹ ರೀತಿಯಲ್ಲಿ ಮಾರ್ಪಾಡನ್ನು ಮಾಡಬೇಕೆಂದು, ಕೇಳಿಕೊಳ್ಳುತ್ತೇನೆ. ಆ ಇಲಾಖೆಯಲ್ಲಿ ಸಾಕಷ್ಟು ಸಮಸ್ಯೆಗಳು ಇವೆ. ಅವುಗಳನ್ನು ಇವತ್ತು ಸರಿಪಡಿಸದೇ ಹೋದರೆ, ಗ್ರಾಮ ಸಭೆಗಳಿಂದ ಏನೂ ಪ್ರಯೋಜನವಾಗುವುದಿಲ್ಲವೆನ್ನುವ ಮಾತನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಈಗಾಗಲೇ ತಾವು ಜಲಸಂಪನ್ಮೂಲ ಇಲಾಖೆಯಲ್ಲಿ ಬಹುತೇಕವಾಗಿ, ನೀರಾವರಿ ಇಲಾಖೆಯಲ್ಲಿ ನನ್ನ ಕ್ಷೇತ್ರದ ವ್ಯಾಪ್ತಿಗೆ ಸಂಬಂಧಪಟ್ಟಂತಹ ವಿಚಾರದ ಬಗ್ಗೆ, ಹೇಳುತ್ತೇನೆ. ಇವತ್ತು 2003–04ರಲ್ಲಿ ಪ್ರಾರಂಭವಾಗಿರುವಂಥಾದ್ದರ ಬಗ್ಗೆ ಹೇಳುತ್ತೇನೆ. ಕಡೂರು ತಾಲ್ಲೂಕಿನ ಸಕ್ಕರೆ ಪಟ್ಟಣ ಹೋಬಳಿ, ದೇವನೂರಿನ ಏತ ನೀರಾವರಿ ಯೋಜನೆ, ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಲಕೆಟ್ ಹೋಬಳಿಯ ಮಾಚೇನಹಳ್ಳಿ ಏತ ನೀರಾವರಿ ಯೋಜನೆ, ಮತ್ತು ಕಡೂರು ತಾಲ್ಲೂಕಿನ ಸಕ್ಕರೆ ಪಟ್ಟಣ ಹೋಬಳಿಯ ಕಬಳಿ ಏತ ನೀರಾವರಿ ಯೋಜನೆ ಇದರ ಜೊತೆಯಲ್ಲಿ ನಮ್ಮ ಕರಗಡ ಏತನೀರಾವರಿ ಯೋಜನೆ, ಏನಿದೆ, ಇವೆಲ್ಲಾ ಬಹುತೇಕವಾಗಿ 1992–93ನೇ ಸಾಲಿನಲ್ಲಿ ಶಂಕುಸ್ಥಾಪನೆಯನ್ನು ಮಾಡಿರುವಂಥಾದ್ದು. ಈಗ ಉದಾಹರಣೆಗೆ ಹೇಳುವುದಾದರೆ ಕರಗಡ ಏತ ನೀರಾವರಿ ಯೋಜನೆಯನ್ನು ಮಾಡುವಂತಹ ಸಂದರ್ಭದಲ್ಲಿ, 1992–93ಕ್ಕೂ ಹಿಂದೆ ಅಂದಿನ ಪ್ರಧಾನಮಂತ್ರಿಗಳಾಗಿದ್ದ, ಸನ್ಮಾನ್ಯ ಹೆಚ್.ಡಿ. ದೇವೇಗೌಡರು ಇದ್ದರು, ಮತ್ತೆ ಅಂದಿನ ನೀರಾವರಿ ಸಚಿವರಾಗಿದ್ದ ಮಾನ್ಯ ನಾಗೇಗೌಡರು ಇವತ್ತು ಇಲ್ಲ. ಶ್ರೀ ಎಸ್.ಆರ್. ಲಕ್ಷ್ಮಯ್ಯನವರು ಇದ್ದರು, ಆ ಸಂದರ್ಭದಲ್ಲಿ ಶಂಕುಸ್ಥಾಪನೆಯನ್ನು ಮಾಡಿ, ಅದನ್ನು ಪ್ರಾರಂಭ ಮಾಡಿ 75 ಲಕ್ಷ ರೂಪಾಯಿಗಳನ್ನು ಸರ್ವೆ ಕಾರ್ಯಕ್ರಮಕ್ಕೆ ಖರ್ಚು ಮಾಡಿ, ಇದಕ್ಕೆ 6 ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆಂಬ ಬಗ್ಗೆ ತಾಂತ್ರಿಕ ಅಧಿಕಾರಿಗಳಿಂದ ಒಂದು ಯೋಜನೆಯನ್ನು ಕೊಟ್ಟು ಆಗಿದೆ. ಇದರ ಬಗ್ಗೆ ಮೊನ್ನೆ ನಾನು ಪ್ರಶ್ನೆ ಮಾಡಿದಾಗ, ಇದಕ್ಕೆ ಸಂಬಂಧಪಟ್ಟಂತಹ ಸಚಿವರು ಏನು ಹೇಳುತ್ತಾರೆಂದರೆ, ಅದಕ್ಕೆ ಈಗಾಗಲೇ ಕೃಷ್ಣ ಬೇಸಿನ್, ಕಾವೇರಿ ಬೇಸಿನ್, ಅಡಚಣೆಯಾಗುತ್ತದೆಂದು. ಇವೆಲ್ಲ ಅಡಚಣೆಯಾಗುತ್ತವೆಂದರೆ, ಸರ್ಕಾರದ ಹಣವನ್ನು ಏಕೆ ವಿನಿಯೋಗ ಮಾಡಲು ಹೋಗಿದ್ದೀರಿ? ಅದೇ ರೀತಿಯಲ್ಲಿ ನಾನು ಹೇಳಿದ ಈ ಮೂರು ಯೋಜನೆಗಳಿಗೆ, ತಲಾ ಯೋಜನೆಗಳಿಗೆ 9 ಲಕ್ಷ ರೂಪಾಯಿಗಳಂತೆ ಖರ್ಚು ಮಾಡಿದ್ದಾರೆ. ಈ ರೀತಿಯಾಗಿ 9 ಲಕ್ಷ ರೂಪಾಯಿಗಳಂತೆ ಖರ್ಚು ಮಾಡಿದ್ದು ಇದು ಈಗಾಗಲೇ 12–13 ವರ್ಷಕ್ಕೆ ಕಾಲು ಇಟ್ಟಂತಹ ಸಂದರ್ಭದಲ್ಲಿ, ಇದರಿಂದ ಆ ಜನರಿಗೂ ಉಪಯೋಗವಿಲ್ಲ, ಸರ್ಕಾರದ ಬೊಕ್ಕಸವೂ ಖಾಲಿಯಾಗಿದೆ. ಈ ರೀತಿಯ ತಾರತಮ್ಯವನ್ನು ಏಕೆ ಮಾಡುತ್ತಾರೆಂಬ ಮಾತನ್ನು ಹೇಳುತ್ತೇನೆ. ಇದನ್ನು ಅತೀ ಜರೂರಾಗಿ ಮಾಡುವಂಥದ್ದರ ಬಗ್ಗೆ ಏನಾದರೂ ಒಂದು ಯೋಜನೆಯನ್ನು

ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನಾನು ಒಂದು ಮಾತನ್ನು ತಮಗೆ ಹೇಳುವುದೆನೆಂದರೆ, ಬಹುತೇಕವಾಗಿ ಈಗಾಗಲೇ ಎಲ್ಲಾ ಕಡೆಗಳಲ್ಲೂ ಕೆರೆಗಳಲ್ಲಿ ಹೂಳು ತೆಗೆಯುವಂತಹ ಕಾರ್ಯಕ್ರಮವನ್ನು ಮಾಡುತ್ತಾ ಇದ್ದಾರೆ. ಈಗ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಮದಗದ ಕೆರೆ, ಅಯ್ಯನ ಕೆರೆ, ಈಗ ಇರತಕ್ಕಂಥ ಎಲ್ಲಾ ಕೆರೆಗಳಿಗೆ, ಇವತ್ತು ಸಾಕಷ್ಟು ಮಳೆ ಬರುತ್ತಾ ಇದೆ. ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳಾಗಿರುವ ಶ್ರೀ ಧರ್ಮಸಿಂಗ್‌ರವರು ಯಾವಾಗ ಪಾದಾರ್ಪಣೆಯನ್ನು ಮಾಡಿ ಸಿಂಹಾಸನವನ್ನು ಏರಿದರೋ, ಅಂದಿನಿಂದ ಮಳೆ ಚೆನ್ನಾಗಿ ಬರುತ್ತಿದೆ. ಅವರ ಕಾಲುಗುಣ ತುಂಬಾ ಚೆನ್ನಾಗಿ ಇದೆ. ಈ ಸಂದರ್ಭದಲ್ಲಿ ನಾವು ಕೆರೆಗಳ ಹೂಳನ್ನು ತೆಗೆಯದೇ ಹೋದರೆ, ಯಾವುದೇ ಪ್ರಯೋಜನವಾಗುವುದಿಲ್ಲ. ಈ ಕೆರೆಗಳ ಹೂಳನ್ನು ತೆಗೆಯುವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಒಂದು ಯೋಜನೆಯ ಬಗ್ಗೆ ಹೇಳುತ್ತೇನೆ, ಹೆಬ್ಬೆ ಜಲಪಾತದಿಂದ 80 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮದಗದ ಕೆರೆಗೆ ನೀರನ್ನು ತರುವಂತಹ ಪ್ರಯತ್ನ ನಡೆಯುತ್ತಿದೆ. ಈ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರಿಗೆ ಹೇಳುವಂಥಾದ್ದು ಇನ್ನು 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರಿಂದ, ಅಯ್ಯನಕೆರೆಗೂ ಸಹ ಒಂದು ಸಬ್ ಚಾನಲ್ ಮೂಲಕ ನೀರನ್ನು ತರಬಹುದಾಗಿದೆ. ಈ ನೀರನ್ನು ತಂದರೆ ಹೆಬ್ಬೆಯ ಜಲಪಾತದಿಂದ, ನಮ್ಮ ಜಿಲ್ಲೆಯ ಬಹುತೇಕ ಕರಗಡ, ಮತ್ತು ಹೆಬ್ಬೆ ಜಲಪಾತ, ಮತ್ತು ಅಯ್ಯನಕೆರೆಗೆ, ನೀರನ್ನು ತಂದಂಥ ಸಂದರ್ಭದಲ್ಲಿ ಶೇ.40 ಭಾಗ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆಯಿಂದ ಹಿಡಿದು ರೈತಾಪಿ ಜನರ ಸಮಸ್ಯೆಯನ್ನು ಪರಿಹಾರ ಮಾಡುವಂತಹ ಒಳ್ಳೆಯ ಯೋಜನೆಯಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಇವತ್ತು ಅವ್ಯಾಹತವಾಗಿ ರಾಜ್ಯದಲ್ಲಿ ನೈಸರ್ಗಿಕವಾಗಿ ಇರುವಂತಹ ಖನಿಜ ಸಂಪತ್ತನ್ನು ರಾಜ್ಯದಿಂದ ಒಂದೇ ಸಮನೆ ಕೊಳ್ಳೆ ಹೊಡೆಯುತ್ತಿದ್ದಾರೆಂದರೆ ತಪ್ಪಾಗುವುದಿಲ್ಲ. ಇದರಿಂದ ಸರ್ಕಾರಕ್ಕೆ ಬರುವಂಥಾದ್ದು, ಕೇವಲ 5 ನಯಾ ಪೈಸೆ, ಆದರೆ ಒಬ್ಬ ವ್ಯಕ್ತಿಗೆ ಸಿಗುವಂಥಾದ್ದು 10 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು. ಇವತ್ತು ಉದಾಹರಣೆಗೆ ಹೇಳುವುದಾದರೆ ಚೈನಾ, ಮತ್ತು ಅಮೇರಿಕಾ, ಜಪಾನ್ ದೇಶಗಳಿಗೆಲ್ಲಾ ಇವತ್ತು ಖನಿಜ ಸಂಪತ್ತು ಹೋಗುತ್ತಿದೆ. ಇಂತಹ ಸಂದರ್ಭದಲ್ಲಿ ಚೈನಾ ದೇಶದಲ್ಲಿ, ಅಮೇರಿಕಾ ದೇಶದಲ್ಲಿ ಖನಿಜಸಂಪತ್ತು ಇಲ್ಲವೆಂದು ಭಾವಿಸಿದ್ದೀರಾ? ಅಲ್ಲಿ ಹೇರಳವಾಗಿ ಈ ಖನಿಜಸಂಪತ್ತು ಇದ್ದರೂ ಸಹಿತ, ನಮ್ಮಂಥ ಬಡ ರಾಷ್ಟ್ರಗಳ ಸಂಪತ್ತನ್ನು ಕೊಳ್ಳೆ ಹೊಡೆದುಕೊಂಡು ಹೋಗುವಂಥದ್ದನ್ನು, ತಡೆಯಬೇಕು. ಇಲ್ಲದಿದ್ದರೆ ಮುಂದೆ ಒಂದು ದಿವಸ ನಮ್ಮ ರಾಜ್ಯದಲ್ಲಿ ಹಾಗೂ ನಮ್ಮ ರಾಷ್ಟ್ರದಲ್ಲಿ ಸರಿಯಾದಂತಹ ರೀತಿಯಲ್ಲಿ ಇವುಗಳನ್ನು ಸದ್ಬಳಕೆಯನ್ನು ಮಾಡುವಂತಹ ಅವಕಾಶಗಳನ್ನು ನಾವು ಕಳೆದುಕೊಳ್ಳುತ್ತೇವೆ. ಇದು ಒಂದೇ ಸಮನೆ ಹೊರಗೆ ಹೋಗುವುದರಿಂದ ಏನಾಗುತ್ತಿದೆಯೆಂದರೆ, ಗ್ರಾಮೀಣ ಪ್ರದೇಶಗಳ ಎಲ್ಲಾ ರಸ್ತೆಗಳು ಹಾಳಾಗಿವೆ. ಇವತ್ತು ರಾಜ್ಯ ಹೆದ್ದಾರಿಗಳು ಹಾಳಾಗಿವೆ. ಇವತ್ತು ನಾನು ಹೇಳಬೇಕೆಂದರೆ, ಕಡಿದಾಳ್ ಮಂಜಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನಮ್ಮ ಕಡೂರು–ಮಂಗಳೂರು ರಸ್ತೆಯನ್ನು ಸಿಮೆಂಟ್‌ನಲ್ಲಿ ಮಾಡಿದ್ದರು. ಆ ರಸ್ತೆಯಲ್ಲಿ ಹಗಲು ರಾತ್ರಿ ಅವ್ಯಾಹತವಾಗಿ, ಸಾವಿರಾರು ಲಾರಿಗಳು ಒಂದೇ ಸಮನೆ ಖನಿಜವನ್ನು ತೆಗೆದುಕೊಂಡು ಹೋಗುವುದರಿಂದ, ಇಡೀ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ಒಂದು ಕಡೆ ಸಂಪತ್ತು ಕೆಲವೇ ಜನರ ಪಾಲಾಗುತ್ತಿದೆ. ಸರ್ಕಾರದ

ಬೊಕ್ಕಸವೂ ತುಂಬುತ್ತಾ ಇಲ್ಲ. ಸರ್ಕಾರಕ್ಕೆ ನಾಮಕಾವಸ್ಥೆಗೆ ಬರುತ್ತಿದೆ, ಅದರ ಜೊತೆಗೆ ರಸ್ತೆಗಳನ್ನು ನಿರ್ಮಾಣ ಮಾಡುತ್ತಿಲ್ಲ. ಇವತ್ತು ನನ್ನ ಕ್ಷೇತ್ರ ಒಂದರಲ್ಲೇ ಸುಮಾರು 8–10 ಬಿಡ್ಜ್‌ಗಳು ಹಾಳಾಗಿವೆ. ಆ ಬಿಡ್ಜ್‌ಗಳನ್ನು ನಿರ್ಮಾಣ ಮಾಡುವುದಾದರೂ ಹೇಗೆ? ದುರಸ್ತಿಯನ್ನು ಮಾಡುವುದಾದರೂ ಹೇಗೆ? ರಸ್ತೆಗಳು ಹಾಳಾಗುತ್ತಿರುವುದನ್ನು ಸರಿಪಡಿಸುವುದು ಹೇಗೆ? ಇದನ್ನು ತಡೆಗಟ್ಟದೇ ಹೋದರೆ, ಮುಂದಿನ ಜನಾಂಗದ, ಮುಂದಿನ ಪೀಳಿಗೆಗೆ, ನಾವು ಉತ್ತರವನ್ನು ಹೇಳಬೇಕಾಗುತ್ತದೆ. ಇವತ್ತು ಈ ಸಂಪತ್ತು ಏನು ಇದೆ, ಇದನ್ನು ಪುನಃ ನಾವು ಉತ್ಪಾದನೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಕಾಯ್ದಿರಿಸಬೇಕಾಗುತ್ತದೆ. ಬುದ್ಧಿವಂತ ದೇಶದ ಜನರು ಅವರಲ್ಲಿರುವಂತಹ ಸಂಪತ್ತನ್ನು ಹಾಗೆಯೇ ಕಾಯ್ದಿರಿಸಿದ್ದಾರೆ. ಆದರೆ ನಮ್ಮ ಸಂಪನ್ಮೂಲಗಳು ಖಾಲಿಯಾಗುತ್ತಾ ಇದೆ. ನಾವು ಮರ, ಗಿಡಗಳನ್ನು ಮನಸ್ಸು ಮಾಡಿ ಬೆಳೆಸಬಹುದು. ಆದರೆ ಖನಿಜವನ್ನು ಬೆಳೆಸುವುದಕ್ಕೆ ಆಗುವುದಿಲ್ಲ. ಇವತ್ತು ಖನಿಜಸಂಪತ್ತು ಒಂದು ಕಡೆ ಹಾಳಾಗುವುದರ ಜೊತೆಗೆ ಸಂಪತ್ತು ಹೋಗುತ್ತಿದೆ, ಸರ್ಕಾರದ ಬೊಕ್ಕಸಕ್ಕೆ ಆದಾಯವೂ ಬರುತ್ತಾ ಇಲ್ಲ. ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಆಗುತ್ತಾ ಇಲ್ಲ. ಈ ಸಂದರ್ಭದಲ್ಲಿ ಸರ್ಕಾರ ಸಾಕಷ್ಟು ಮುತವರ್ಜಿಯನ್ನು ವಹಿಸಿ, ಅದನ್ನು ತಡೆಹಿಡಿಯಬೇಕಾಗುತ್ತದೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲೇ ಈಗಾಗಲೇ ರಾಷ್ಟ್ರಪತಿಯವರಿಂದ, ರಾಜ್ಯಪಾಲರಿಂದ, ಮುಖ್ಯಮಂತ್ರಿಯವರಿಂದ, ಪ್ರಧಾನಮಂತ್ರಿಯವರಿಂದ ಶಿಫಾರಸ್ಸು ಪಡೆದುಕೊಂಡು ಸರ್ಕಾರದ ಎಲ್ಲಾ ಅನುಮತಿಯನ್ನು ಪಡೆದುಕೊಂಡಿದ್ದಾರೆ. ಆ ರೀತಿ ಅನುಮತಿಯನ್ನು ಪಡೆದುಕೊಂಡಿರುವುದರಿಂದ ನಾವು ಚಳುವಳಿಯನ್ನು ಮಾಡಿ, ಇದನ್ನು ನಿಲ್ಲಿಸಲು ಹೋದಾಗ, ಕಾನೂನಿನ ವಿರುದ್ಧವಾಗಿ ಹೋಗಿದ್ದಾರೆಂದು ಆ ಸಂದರ್ಭದಲ್ಲಿ ನಮ್ಮನ್ನು ಒಳಗಡೆ ಹಾಕಬೇಕಾಗುತ್ತದೆ. ಈ ರೀತಿಯ ವ್ಯವಸ್ಥೆಯನ್ನು ಏಕೆ ನಿರ್ಮಾಣ ಮಾಡುತ್ತಿದ್ದೀರಾ? ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂತಹ ಒಗರೆಕಾಯನಗಿರಿ ಇರಬಹುದು, ಅಥವಾ ಕೆಮ್ಮಣ್ಣುಗುಂಡಿಯಲ್ಲಿರುವಂತಹ ಎಲ್ಲಾ ಖನಿಜಸಂಪತ್ತು ಲೂಟ್ ಆಗಿ ಹೋಯಿತು, ರೋಡನ್ನೂ ಸಹಿತ ಮಾಡಲಿಲ್ಲ. ಈಗ ಸನ್ಮಾನ್ಯ ಹೆಚ್.ಡಿ. ರೇವಣ್ಣನವರು ಬಂದಮೇಲೆ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟದ್ದರಿಂದ ರೋಡ್ ಮಾಡುವುದಕ್ಕೆ ಅನುಕೂಲವಾಯಿತು. ಅದೇ ರೀತಿಯಲ್ಲಿ ನನ್ನ ಕ್ಷೇತ್ರದಲ್ಲಿರುವಂತಹ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿ ಕೊಟ್ಟು, ಸಂಬಂಧಪಟ್ಟಂಥವರಿಗೆ ಎಲ್ಲಾ ಲೆಸೆನ್ಸ್, ಪರವಾನಗಿಯನ್ನು ಕೊಟ್ಟು, ನಾವು ಚಳುವಳಿ ಮಾಡಲು ಹೋದಾಗ ನಮ್ಮನ್ನು ಒಳಗೆ ಹಾಕುವಂತಹ ಸಂದರ್ಭ ಬೇಡವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಇದಕ್ಕೆ ಸಂಬಂಧಪಟ್ಟಂತೆ ಅರಣ್ಯ ಇಲಾಖೆಯಲ್ಲಿ ಸುಮಾರು 50–60 ವರ್ಷಗಳಿಂದ ಎರಡು ವಿಧಾನಗಳು ಇವೆ. ನೂರಾರು ಎಕರೆ ಇರುವಂಥವರು ಎನ್‌ಕ್ರೋಚ್ ಮಾಡಿರುವಂಥಾದ್ದು ಒಂದು ವಿಧಾನ. ಮತ್ತೆ ಒಂದು ಹೊತ್ತಿನ ಊಟಕ್ಕೂ ಗತಿ ಇಲ್ಲದಿದ್ದವರು, 2–3 ಎಕರೆ ಜಮೀನನ್ನು ಎನ್‌ಕ್ರೋಚ್ ಮಾಡಿರತಕ್ಕಂಥಾದ್ದು, ಜಾಗವನ್ನು ಸಾಗುವಳಿಗೆ ತೆಗೆದುಕೊಂಡು ಇರುವುದು ಇನ್ನೊಂದು ವಿಧಾನ. ಇವತ್ತು 3–4 ಎಕರೆ ಜಾಗವನ್ನು 50–60 ವರ್ಷಗಳಿಂದ ಸಾಗುವಳಿ ಮಾಡುವುದರ ಜೊತೆಗೆ, ಅಲ್ಲಿಗೆ ಬೇಕಾದಂತಹ ಕನಿಷ್ಠ ಅವಶ್ಯಕತೆಗಳಾದಂತಹ . . .

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಸಚಿವರು): ಮಾನ್ಯ ಧರ್ಮೇಗೌಡರೆ, ತಾವು ಒಂದು ನಿಮಿಷ ಯೀಲ್ಡ್ ಆಗಿ, ತಾವು ಮೂರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಈ ಮೂರರಲ್ಲಿ, ನೀವು ಹಣವಿಲ್ಲದೇ, ಸರ್ವೆ ಮಾಡದೇ, ಪೌಂಡೇಷನ್ ಸ್ಟೋನ್ ಅನ್ನು ಹಾಕಿದ್ದೀರಿ. ಅದು ಹಿಂದಿನ ಸರ್ಕಾರದಲ್ಲಿ ಮಾನ್ಯ ಹೆಚ್.ಡಿ. ದೇವೇಗೌಡರು ಹಾಕಿರುವಂಥದ್ದು. ಆಗ ಇನ್ನೂ ಮಂಜೂರು ಆಗಿರಲಿಲ್ಲ, ಎಸ್ಟಿಮೇಟ್ ಇರಲಿಲ್ಲ, ಏನೂ ಇರಲಿಲ್ಲ. ಮೊನ್ನೆ ಮೇಜರ್ ಇರಿಗೇಷನ್ ಬೋರ್ಡ್‌ನಲ್ಲಿ, ಅದನ್ನು ಮಂಜೂರಾತಿ ಮಾಡಿ, ಸುಮಾರು 80 ಕೋಟಿ ರೂಪಾಯಿಗಳನ್ನು ಇದಕ್ಕೆ ಮಂಜೂರು ಮಾಡಿದ್ದೇವೆ. ಇದನ್ನು ಕರ್ನಾಟಕ ನೀರಾವರಿ ನಿಗಮದಿಂದ ತೆಗೆದುಕೊಳ್ಳಬೇಕೆಂಬ ಪ್ರಸ್ತಾವನೆ, ಈಗ ಸರ್ಕಾರದ ಮುಂದೆ ಇದೆ. ಸುಮಾರು ಹೆಚ್ಚು ಕಡಿಮೆ 30 ಸಾವಿರ ಹೆಕ್ಟಾರ್ ಭೂಮಿಗೆ ನೀರಾವರಿಯಾಗುವಂತಹ ಯೋಜನೆಯಾಗಿರುವುದರಿಂದ ಇದನ್ನು ತೆಗೆದುಕೊಳ್ಳಬೇಕೆಂಬುದು ಇದೆ. ಇನ್ನು ಎರಡನೆಯದಾಗಿ, ತಾವು ಏನು ಹೇಳಿದ್ದೀರಿ, ಅದು ಕಾವೇರಿ ಮತ್ತು ಕೃಷ್ಣ ಈ ಎರಡರ ಮಧ್ಯೆ ಕ್ಯಾಚ್‌ಮೆಂಟ್ ಏರಿಯಾ ಬರುವುದರಿಂದ, ಅದು ಸ್ವಲ್ಪ ತಾಪತ್ರಯವಾಗಿದೆ. ಅದಕ್ಕಾಗಿ, ಅದನ್ನು ನಾವು ಯಾವಾಗ ನಿರ್ಣಯ ಮಾಡಬೇಕೆಂಬ ಬಗ್ಗೆ ಯೋಚನೆಯನ್ನು ಮಾಡುತ್ತಿದ್ದೇವೆ. ಇನ್ನು ಮೂರನೆಯದಾಗಿ, ತಾವು ಹೇಳಿದಂತಹ ವಿಚಾರದ ಬಗ್ಗೆ ನಾವು ಅಪ್ರೂವಲ್ ಕೊಟ್ಟಿದ್ದೇವೆ. ಈಗ ಇತ್ತೀಚೆಗೆ ನೀರಾವರಿ ಯೋಜನೆಗಳು ವಿಶೇಷವಾಗಿ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಬೇಕೆಂಬ ದೃಷ್ಟಿಯಿಂದಲೇ, ಅನೇಕ ಯೋಜನೆಗಳು ಹಿಂದೆ ಏನು ನೆನೆಗುದಿಗೆ ಬಿದ್ದಿದ್ದವು, ಅವೆಲ್ಲವನ್ನೂ ಇವತ್ತು ಒಂದೊಂದಾಗಿ ಮಾಡುತ್ತಿದ್ದೇವೆ. ಅವುಗಳಿಗೆ ಅಪ್ರೂವಲ್ ಅನ್ನೂ ಕೂಡ ಕೊಟ್ಟಿದ್ದೇವೆ. ಈಗ ತಮ್ಮ ಪ್ರಾಜೆಕ್ಟ್ ಕೂಡ ಬಹಳ ಬೇಗ ಮಂಜೂರಾತಿಯಾಗಿ, ಕೆಲಸವೂ ಪ್ರಾರಂಭವಾಗುತ್ತದೆ.

ಶ್ರೀ ಎಸ್.ಎಲ್. ಧರ್ಮೇಗೌಡ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಜಲಸಂಪನ್ಮೂಲ ಸಚಿವರಿಗೆ ವಂದನೆಯನ್ನು ಹೇಳುತ್ತೇನೆ. ತಾವು ದಯಮಾಡಿ ಈ ಹೆಬ್ಬೆ ಜಲಪಾತದಿಂದ ಮದಗದ ಕೆರೆಗೆ ಬರುವುದರ ಜೊತೆಗೆ, ಒಂದು ಹತ್ತು ಲಕ್ಷ ರೂಪಾಯಿಗಳನ್ನು ಅಯ್ಯನಕೆರೆಯ ಸರ್ವೆಗೆ ಇಡಬೇಕೆಂದು ಕೇಳುತ್ತೇನೆ. ತಾವು ಇದರ ಬಗ್ಗೆ ಭರವಸೆಯನ್ನು ಕೊಟ್ಟರೆ ಸಾಕು. ನೀವು 10 ಲಕ್ಷ ರೂಪಾಯಿಗಳನ್ನು ಸರ್ವೆ ಕಾರ್ಯಕ್ಕೆ ಇಟ್ಟರೆ ಈ ಕೆಲಸವಾಗುತ್ತದೆಂದು ಹೇಳುತ್ತೇನೆ. ಇವತ್ತು ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾಮೇನಳ್ಳಿ, ಯರಡಕ್ಕಿಬಯಲು, ಬಾದೆಮನೆ, ಮತ್ತು ಸಂಬಂಧಪಟ್ಟಂತಹ ಲಿಂಗದಳ್ಳಿ ಹೋಬಳಿಗಳಲ್ಲಿ, ಸುಮಾರು 10 ಸಾವಿರ ಕುಟುಂಬಗಳು ಹೊತ್ತಿನ ಊಟಕ್ಕೂ ಇಲ್ಲದೇ ಇರುವಂತಹ ಕುಟುಂಬಗಳು, ಇವತ್ತು ಸಾಗುವಳಿ ಚೀಟಿಯನ್ನು ತೆಗೆದುಕೊಂಡು ಕುಳಿತಿದ್ದಾರೆ. ಅವರಿಗೆ ಶಾಲೆಗಳನ್ನು ಕೊಟ್ಟಿದ್ದೇವೆ, ಬೋರ್‌ವೆಲ್‌ಗಳನ್ನು ಕೊಟ್ಟಿದ್ದೇವೆ, ಎಲ್ಲಾ ರೀತಿಯ ಸೌಕರ್ಯಗಳನ್ನೂ ಕೊಟ್ಟಿದ್ದೇವೆ. ಈಗ ಅರಣ್ಯ ಇಲಾಖೆಯವರು ಏಕಾಏಕಿ ಬಂದು, ಸರ್ವೋಚ್ಚ ನ್ಯಾಯಾಲಯದ ತೀರ್ಮಾನ ಇದೆ, ನೀವು ಖಾಲಿ ಮಾಡಿ ಎಂದು ಹೇಳಿದರೆ ಹೇಗೆ? ಅದಕ್ಕೋಸ್ಕರ, ನಮ್ಮ ರಾಜ್ಯ ಸರ್ಕಾರ ಮತ್ತು ಸಂಬಂಧ ಪಟ್ಟವರು ದಯಮಾಡಿ ಆ ಜನರ ರಕ್ಷಣೆಗೆ ಬರಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು, ಬಡ ಜನರಿಗೆ ಕೆ.ಜಿ.ಗೆ ಮೂರು ರೂಪಾಯಿಯಂತೆ ಅಕ್ಕಿ ಕೊಟ್ಟಿದ್ದೇವೆ, ರೈತರಿಗೆ ಶೇಕಡಾ 6ರಷ್ಟು ಬಡ್ಡಿದರದಲ್ಲಿ ಸಾಲ ಕೊಡತಕ್ಕಂಥ ವ್ಯವಸ್ಥೆಯಾಗಿದೆ. ಇವುಗಳೆಲ್ಲದರ ಜೊತೆಯಲ್ಲಿ ನಾವು ನಮ್ಮಲ್ಲಿರತಕ್ಕಂಥ ಪಕ್ಷಿಧಾಮಗಳು ಮತ್ತು ಪಕ್ಷಿಗಳ ಬಗ್ಗೆ ಗಮನ ಕೊಡುತ್ತಿಲ್ಲ. 200 ಇಂಚು, 300

ಇಂಚು ಮಳೆಯಾಗತಕ್ಕಂಥ ಜಾಗದಲ್ಲಿ ಅರಣ್ಯ ಇಲಾಖೆಯವರು ನೀಲಗಿರಿ, ಅಕೇಶಿಯಾಗಳನ್ನು ಹಾಕುತ್ತಿದ್ದಾರೆ. ಅದನ್ನು ತಡೆಗಟ್ಟಬೇಕು. ಅರಳಿಮರ, ಆಲದಮರ, ಗೋಣಿ ಮರ, ಇಂಥ ಮರಗಳನ್ನು ಬೆಳೆಸಿದರೆ ಮಳೆ ಬರಲೂ ಅನುಕೂಲವಾಗುವುದರ ಜೊತೆಗೆ, ಪರಿಸರ ಕಾಪಾಡುವುದಕ್ಕೂ ಅನುಕೂಲವಾಗುತ್ತದೆ, ಪಕ್ಷಿ ಪ್ರಾಣಿಗಳಿಗೂ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಅರಣ್ಯ ಇಲಾಖೆಯವರು, ರೋಡ್ ಸೈಡ್‌ನಲ್ಲಿರುವಂಥ ಮರಗಳನ್ನು, ರೋಡಿಗೆ ಅಡ್ಡವಾಗುತ್ತವೆ ಎಂದು ಕಡಿಸುತ್ತಿದ್ದಾರೆ. ನಿಜವಾಗಿಯೂ ರೋಡಿಗೆ ಅಡ್ಡವಾಗುವಂಥ ಮರಗಳನ್ನು ಮಾತ್ರ ಕಡಿಸಬೇಕು. ಅವರ ಸ್ವಂತ ಉಪಯೋಗಕ್ಕೋಸ್ಕರ, ಅರಣ್ಯ ಇಲಾಖೆಯವರು ಸಂಬಂಧಪಟ್ಟವರಿಗೆ ಪರವಾನಗಿ ಕೊಟ್ಟು ಮರಗಳನ್ನು ಕಡಿಸತಕ್ಕಂಥಾದ್ದನ್ನು ನಿಲ್ಲಿಸಬೇಕು ಎನ್ನುವ ಮಾತನ್ನು ಹೇಳುತ್ತಾ, ಎರಡು ಮಾತುಗಳನ್ನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನಮಸ್ಕರಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಅಧ್ಯಕ್ಷರು: ಈಗ ಮಾಧುಸ್ವಾಮಿಯವರು.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಭಾಷಣ ಮಾಡುವುದಕ್ಕೆ ಮೊದಲೇ ನಮಗೆ ಬಹಳ ಬೇಸರವಾಗಿದೆ. ನಾನು ಮತ್ತು ಶ್ರೀರಾಮರೆಡ್ಡಿಯವರು ವಾಟಾಳ್ ನಾಗರಾಜರಿಗೆ ಎಡ ಮತ್ತು ಬಲದಲ್ಲಿ ಕುಳಿತುಕೊಂಡು, ಅವರಿಗೆ ಬಾಡಿಗಾರ್ಡ್‌ಗಳ ಹಾಗಿದ್ದು, ಅವರ ಎಲ್ಲಾ ತೀಟೆಗಳಿಗೆ, ತೆವಲಿಗೆ ಸ್ಪಂದಿಸುತ್ತಿದ್ದರೆ, ಇವತ್ತು ನಾವು ಮಾತನಾಡುತ್ತೇವೆ ಎಂದು ಬಂದರೆ, ಅವರು ಕಪ್ಪು ಬಟ್ಟೆ ಹಾಕಿಕೊಂಡು ಬಂದು ಕುಳಿತಿದ್ದಾರೆ. ಇದು ನ್ಯಾಯವೇ ಎಂದು ಅವರು ಮೊದಲು ಹೇಳಬೇಕು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ: ತಮಿಳುನಾಡಿನವರು ಕಾವೇರಿ ನೀರು ಬಿಡಬೇಕೆಂದು ರಾಜಕೀಯ ಮಾಡುತ್ತಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ನಾನು ಕಪ್ಪು ಬಟ್ಟೆ ಹಾಕಿಕೊಂಡು ಬಂದಿರುವುದು ಏಕೆಂದರೆ, ನಾನು ನಿಮ್ಮನ್ನು ಕೇಳಿದರೆ ನೀವು ಅವಕಾಶ ಕೊಡುವುದಿಲ್ಲ. ಆದ್ದರಿಂದ ನಾನು ಕಪ್ಪುಬಟ್ಟೆ ಹಾಕಿಕೊಂಡು ಬಂದಿರುವುದು ಏಕೆಂದು ನೀವೇ ಕೇಳಲಿ ಎಂದು ನಾನು ಕಪ್ಪುಬಟ್ಟೆ ಹಾಕಿಕೊಂಡು ಬಂದಿದ್ದೇನೆ. ಇವತ್ತು ತಮಿಳುನಾಡಿನಲ್ಲಿ ಎ.ಐ.ಎ.ಡಿ.ಎಂ.ಕೆ ಯವರು, ಡಿ.ಎಂ.ಕೆ. ಯವರು ಕರ್ನಾಟಕದ ವಿರುದ್ಧ, ಕರ್ನಾಟಕದ ರೈತರ ವಿರುದ್ಧ, ನಮಗೆ ಕರ್ನಾಟಕದ ನೀರು ಕೊಡಬೇಕೆಂದು ಹೇಳಿ, ವಿನಾಕಾರಣ ರಾಜಕೀಯ ಮಾಡುತ್ತಿದ್ದಾರೆ. ಈ ವಿಷಯವಾಗಿ ಡಿ.ಎಂ.ಕೆ. ಯವರು ಡೆಲ್ಲಿಗೆ ಹೋಗುವುದು, ಅವರು ಬಂದ ತಕ್ಷಣ ಎ.ಐ.ಎ.ಡಿ.ಎಂ.ಕೆ. ಯವರು ಡೆಲ್ಲಿಗೆ ಹೋಗುವುದು, ಇವರು ಬಂದ ತಕ್ಷಣ ಅವರು, ಅವರು ಬಂದ ತಕ್ಷಣ ಇವರು ಹೋಗಿ, ರಾಜಕೀಯ ಮಾಡುತ್ತಿದ್ದಾರೆ. ತಮಿಳುನಾಡಿಗೆ ನಾವು ಕಬಿನಿಯಿಂದ ಸಿಕ್ಕಾಪಟ್ಟೆ ನೀರು ಬಿಡುತ್ತಿದ್ದೇನೆ, ಸಿಕ್ಕಾಪಟ್ಟೆ ನೀರು ಹೋಗುತ್ತಿದೆ. ಈಗ ಅವರಿಗೆ ನೀರು ಬೇಕಾಗಿಲ್ಲ. ಅವರಿಗೆ ಬೇಕಾಗಿರತಕ್ಕಂಥಾದ್ದು ಚಳುವಳಿ. ಅವರಿಗೆ ಸಂಪೂರ್ಣವಾಗಿ ಬೇಕಾಗಿರತಕ್ಕಂಥಾದ್ದು ರಾಜಕೀಯ. ಆದ್ದರಿಂದ, ಅವರನ್ನು ವಿರೋಧಿಸಿ, ಆ ಚಳುವಳಿಯನ್ನು ವಿರೋಧಿಸಿ, ನಾನು ಕಪ್ಪು ಬಾವುಟವನ್ನು ಹಿಡಿದು ಸಭಾತ್ಯಾಗ ಮಾಡುತ್ತಿದ್ದೇನೆ.